ನಿಮ್ಮ ನಂಬಿಕೆಯ ಧ್ವನಿ

# ಧೈರ್ಯದ ದಾರಿ

DAIRYADA DAARI NEWS PAPER

EMAIL : dairyadadaari@gmail.com ಸಂಪುಟ: 01 ಸಂಚಿಕೆ: 155

ಬೆಲೆ ರೂ : 2.00

ರಾಯಚೂರು

ಪುಟ: 4

ಸಂಪಾದಕರು : ಸೈಯದ್ ಅಹ್ಮದ್ ಹುಸೇನಿ ಮತವಾಲೆ

Cell : 6360866626, 9036887793

KANNADA DAILY NEWS PAPER

ಕನ್ನಡ ದಿನಪತ್ರಿಕೆ

DAIRYADA DAARI

RNI NO: KNKAN/25/A2795 ಗುರುವಾರ: 28–05–2026

## ಜಿಲ್ಲೆಯಲ್ಲಿ ತೈಲ ಕೊರತೆ ಇಲ್ಲ, ಸಾರ್ವಜನಿಕರು ಅಂತಕ ಪಡಬಾರದು: ಜಿಲ್ಲಾಧಿಕಾರಿ ಪೂವಿತಾ ಎಸ್.

ಧೈರ್ಯದ ದಾರಿ



**ರಾಯಚೂರು ಮೇ.27:** ಜಿಲ್ಲೆಯಲ್ಲಿ ಪೆಟ್ರೋಲ್, ಡೀಸೆಲ್ ಹಾಗೂ ಎಲ್.ಪಿ.ಜಿ ಅನಿಲ್ ಪೂರೈಕೆಯಲ್ಲಿ ಯಾವುದೇ ಕೊರತೆಯಿಲ್ಲ. ಹಾಗಾಗಿ ಸಾರ್ವಜನಿಕರು ಅಂತಕ ಪಡಬಾರದು ಎಂದು ಜಿಲ್ಲಾಧಿಕಾರಿಗಳಾದ ಪೂವಿತಾ ಎಸ್. ಅವರು ಹೇಳಿದರು.

ಮೇ.27ರ ಬುಧವಾರ ದಂದು ನಗರದ ನೂತನ ಜಿಲ್ಲಾಧಿಕಾರಿಗಳ ಕಚೇರಿಯ ವಿಡಿಯೋ ಕಾನ್ಫರೇಷನ್ ಸಭಾಂಗಣದಲ್ಲಿ ಜಿಲ್ಲೆಯ ಅಧಿಕಾರಿಗಳು, ತೈಲ ಕಂಪನಿಯ ಸೇಲ್ಸ್ ಅಧಿಕಾರಿಗಳು ಹಾಗೂ ಪೆಟ್ರೋಲ್, ಡೀಸೆಲ್ ಬಂಕ್ ಪ್ರತಿನಿಧಿಗಳೊಂದಿಗೆ ವಿಡಿಯೋ ಸಂವಾದ ಸಭೆಯ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.

ಜಿಲ್ಲೆಯಲ್ಲಿ ತೈಲ ಪೂರೈಕೆ ವಿಷಯದಲ್ಲಿ ಕಂಪನಿಗಳು ಜಾಗರೂಕತೆ ವಹಿಸಿ, ಸಮಸ್ಯೆ ಬಾರದ ರೀತಿಯಲ್ಲಿ ಇಂಧನ ಪೂರೈಸಬೇಕು. ಜಿಲ್ಲೆಗೆ ವಿವಿಧ ತೈಲ ಕಂಪನಿ ವಿತರಕರು ಸಮರ್ಪಕವಾಗಿ ಪೆಟ್ರೋಲ್ ಮತ್ತು ಡೀಸೆಲ್ ಪೂರೈಸಬೇಕು. ಎಲ್ಲ ಬಂಕ್ ಮಾಲೀಕರು ದೈನಂದಿನ ಮಾಹಿತಿ ಒದಗಿಸಬೇಕು. ಸಾರ್ವಜನಿಕರ ಬೇಡಿಕೆ ಅನುಸಾರ ಇಂಧನ ಪೂರೈಸಲು ಅಗತ್ಯ ಕ್ರಮ ಕೈಗೊಳ್ಳಬೇಕು ಎಂದು ಮಾರಾಟಗಾರರಿಗೆ ಜಿಲ್ಲಾಧಿಕಾರಿಗಳು ಸೂಚಿಸಿದರು.

ಮುಂಗಾರು ಆರಂಭವಾಗುತ್ತಿರುವರಿಂದ ರೈತರ ಭೂಮಿ ಉಳುಮೆ ಕಾರ್ಯ ನಡೆಯುತ್ತಿದೆ. ಹಾಗಾಗಿ ರೈತರಿಗೆ ಯಾವುದೇ ಅನಾನುಕೂಲ ಹಾಗೂ ಸಮಸ್ಯೆಯಾಗದಂತೆ ಇಂಧನ ಪೂರೈಕೆ ಮಾಡಬೇಕು. ನಿಗದಿತ ದರದಲ್ಲಿ ತೈಲವನ್ನು ಮಾರಾಟ ಮಾಡಬೇಕು. ಒಂದು ವೇಳೆ ಹೆಚ್ಚಿನ ಬೆಲೆಗೆ ಮಾರಾಟ ಮಾಡಿದಲ್ಲಿ ಅಂತಹವರ ವಿರುದ್ಧ ಕ್ರಮ ಜರುಗಿಸಲಾಗುತ್ತದೆ ಎಂದು ಸಂಬಂಧಿಸಿದ ಅಧಿಕಾರಿಗಳಿಗೆ ಜಿಲ್ಲಾಧಿಕಾರಿಗಳು ಸೂಚನೆ ನೀಡಿದರು.

ಗ್ರಾಹಕರ ಹಿತರಕ್ಷಣೆ, ಇಂಧನ ಸುರಕ್ಷತೆ ಮತ್ತು ನಿಯಮಾವಳಿಗಳ ಪಾಲನೆ ಕುರಿತು ಸಭೆಯಲ್ಲಿ ಚರ್ಚೆ ನಡೆಸಲಾಯಿತು.

ತೈಲ ಕಂಪನಿ ಪ್ರತಿನಿಧಿಗಳು ಮಾತನಾಡಿ, ಜಿಲ್ಲೆಯಲ್ಲಿ ಇಂಧನದ ಕೊರತೆ ಇರುವುದಿಲ್ಲ ಎಂದು ಸ್ಪಷ್ಟಪಡಿಸುವುದರ ಜೊತೆಗೆ ಇಂಡೆಂಟ್ ಅನುಗುಣವಾಗಿ ಇಂಧನ ಪೂರೈಸಲಾಗುತ್ತಿದೆ ಎಂದು ಸಭೆಗೆ ಮಾಹಿತಿ ನೀಡಿದರು.

ಆಹಾರ ಇಲಾಖೆಯ ಉಪ ನಿರ್ದೇಶಕ ನಜೀರ್ ಅಹಮದ್ ಅವರು ಮಾತನಾಡಿ, ಜಿಲ್ಲೆಯಲ್ಲಿ ಬಿಪಿಸಿಎಲ್ 48, ಐಒಸಿಎಲ್ 84 ಎಚ್‌ಪಿಸಿಎಲ್ 30 ಇದ್ದು, ನಯಾರ 32 ಒಳಗೊಂಡಂತೆ ಒಟ್ಟು 194 ಪೆಟ್ರೋಲ್ ಬಂಕ್‌ಗಳು ಕಾರ್ಯ ನಿರ್ವಹಿಸುತ್ತಿವೆ ಎಂದು ಸಭೆಗೆ ಮಾಹಿತಿ ನೀಡಿದರು.

ಇದೇ ಸಂದರ್ಭದಲ್ಲಿ ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿಗಳಾದ ಅರುಣಾಂಗ್ಷು ಗಿರಿ, ರಾಯಚೂರು ಸಹಾಯಕ ಆಯುಕ್ತ ಡಾ.ಹಂಪಣ್ಣ ಸಜ್ಜನ್, ಲಿಂಗಸುಗೂರು ಸಹಾಯಕ ಆಯುಕ್ತ ಬಸವಣ್ಣೆಪ್ಪ ಕಲಶೆಟ್ಟಿ, ರಾಯಚೂರು ತಹಶಿಲ್ದಾರ್ ಸುರೇಶ್ ವರ್ಮಾ, ಆಹಾರ ಇಲಾಖೆಯ ವ್ಯವಸ್ಥಾಪಕ ಹರೀಶ್ ಸೇರಿದಂತೆ ಜಿಲ್ಲೆಯ ವಿವಿಧ ತಾಲೂಕಿನ ತಹಶೀಲ್ದಾರರು, ವಿವಿಧ ತೈಲ ಕಂಪನಿಗಳ ಪ್ರತಿನಿಧಿಗಳು ಸಭೆಯಲ್ಲಿ ಇದ್ದರು.

## ರಾಯಚೂರಿನಲ್ಲಿ ಜ್ಞಾನದೀಪ ಕೋಚಿಂಗ್ ಸೆಂಟರ್ ಬೇಸಿಗೆ ತರಗತಿಗಳ ಸಮಾರೋಪ

### ಮಕ್ಕಳ ಪ್ರತಿಭೆ, ಜ್ಞಾನ ಪ್ರದರ್ಶನಕ್ಕೆ ಸಾಕ್ಷಿಯಾದ ಸಾಂಸ್ಕೃತಿಕ ಸಂಭ್ರಮ

ಧೈರ್ಯದ ದಾರಿ




**ರಾಯಚೂರು:** ನಗರದ ಐಬಿ ರಸ್ತೆಯಲ್ಲಿರುವ ಜ್ಞಾನದೀಪ ಕೋಚಿಂಗ್ ಸೆಂಟರ್ ವತಿಯಿಂದ ಆಯೋಜಿಸಲಾದ ಬೇಸಿಗೆ ರಜೆಯ ತರಗತಿಗಳ ಸಮಾರೋಪ ಸಮಾರಂಭ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮ ಭಾವುಕ ಕ್ಷಣಗಳು ಮತ್ತು ವಿದ್ಯಾರ್ಥಿಗಳ ಅದ್ಭುತ ಪ್ರತಿಭಾ ಪ್ರದರ್ಶನಕ್ಕೆ ಸಾಕ್ಷಿಯಾಯಿತು.

ಜ್ಞಾನದೀಪ ಕೋಚಿಂಗ್ ಸೆಂಟರ್ ಸಭಾಂಗಣದಲ್ಲಿ ನಡೆದ ಕಾರ್ಯಕ್ರಮವನ್ನು ಸಂಸ್ಥಾಪಕರಾದ ಶಿವಪುತ್ರ ಮುಷ್ಟೂರು, ಸಾಮಾಜಿಕ ಹೋರಾಟಗಾರರಾದ ರೂಪ ಶ್ರೀನಿವಾಸ್ ನಾಯಕ್ ಹಾಗೂ ರವೀಂದ್ರ ಜಲ್ದಾರ್ ಅವರು ಸಸಿಗೆ ನೀರುಣಿಸುವ ಮೂಲಕ ಉದ್ಘಾಟಿಸಿದರು.

ಮುಖ್ಯ ಅತಿಥಿಯಾಗಿ ಮಾತನಾಡಿದ ರವೀಂದ್ರ ಜಲ್ದಾರ್ ಅವರು, ಕಳೆದ ಹತ್ತು ವರ್ಷಗಳಿಂದ ಬೇಸಿಗೆ ತರಗತಿಗಳನ್ನು ಯಶಸ್ವಿಯಾಗಿ ನಡೆಸುತ್ತಿರುವುದು ಸಂತಸದ ವಿಷಯ. ಇಲ್ಲಿ ಕಲಿತ ಮಕ್ಕಳು ಕನ್ನಡ ಹಾಗೂ ಇಂಗ್ಲಿಷ್ ಭಾಷೆಯಲ್ಲಿ ಸುಲಲಿತವಾಗಿ ನಿರೂಪಣೆ ಮಾಡುತ್ತಿರುವುದನ್ನು ನೋಡಿ ಹೆಮ್ಮೆ ಅನಿಸಿತು ಎಂದು ಹೇಳಿದರು.

ಇನ್ನೋರ್ವ ಅತಿಥಿಯಾದ ರೂಪ ಶ್ರೀನಿವಾಸ್ ನಾಯಕ್ ಅವರು, ಮಕ್ಕಳು ಜೀವನದಲ್ಲಿ ಉತ್ತಮ ಮೌಲ್ಯಗಳನ್ನು ಅಳವಡಿಸಿಕೊಂಡು ಸಮಾಜಕ್ಕೆ ಮಾದರಿಯಾಗಬೇಕು ಎಂದು ಸಲಹೆ ನೀಡಿದರು. ವಿದ್ಯಾರ್ಥಿಗಳು ವೇದಿಕೆಯಲ್ಲಿ ಟ್ರಿಗ್ನೋಮೆಟ್ರಿ ಸೂತ್ರಗಳು, ರಾಜ್ಯಗಳ ರಾಜಧಾನಿಗಳು ಹಾಗೂ ಜಿಲ್ಲೆಗಳ ಹೆಸರುಗಳನ್ನು ಕ್ಷಣಾರ್ಧದಲ್ಲಿ ಉತ್ತರಿಸುತ್ತಿರುವುದು ಜ್ಞಾನದೀಪ ಕೋಚಿಂಗ್ ಸೆಂಟರ್‌ನ ಶೈಕ್ಷಣಿಕ ಗುಣಮಟ್ಟವನ್ನು ತೋರಿಸುತ್ತದೆ ಎಂದು ಪ್ರಶಂಸಿಸಿದರು.

ಕಾರ್ಯಕ್ರಮದಲ್ಲಿ ಮಾತನಾಡಿದ ದಾದಂಡಪ್ಪ ಬಿರಾದಾರ ಅವರು, ಸಾಮಾನ್ಯವಾಗಿ ವೇದಿಕೆ ಕಾರ್ಯಕ್ರಮಗಳಲ್ಲಿ ನೃತ್ಯ ಮತ್ತು ಸಿನೆಮಾ ಹಾಡುಗಳೇ ಕಾಣಸಿಗುತ್ತವೆ. ಆದರೆ ಇಲ್ಲಿ ಮೂರನೇ ತರಗತಿ ಮಕ್ಕಳು ನಿರ್ಭಯವಾಗಿ ಮಗ್ಗಿಗಳು ಹೇಳುತ್ತಿರುವುದು ಆಶ್ಚರ್ಯ ತಂದಿತು. ಇಂತಹ ಶಿಕ್ಷಣ ಪದ್ಧತಿ ರಾಯಚೂರಿಗೆ ಮಾದರಿಯಾಗಿದೆ ಎಂದು ಹೇಳಿದರು.

ಸಂಸ್ಥಾಪಕರಾದ ಶಿವಪುತ್ರ ಮುಷ್ಟೂರು ಅವರು ಮಾತನಾಡಿ, "ಹೊರ ಜಿಲ್ಲೆಗಳಿಗೆ ತೆರಳಿ ಸಮಯ ಮತ್ತು ಹಣ ವ್ಯರ್ಥ ಮಾಡುವ ಅಗತ್ಯವಿಲ್ಲ. ನಮ್ಮ ಜಿಲ್ಲೆಯಲ್ಲಿಯೇ ಉತ್ತಮ ಗುಣಮಟ್ಟದ ಶಿಕ್ಷಣವನ್ನು ನೀಡುತ್ತಿದ್ದು, ನುರಿತ ಬೋಧಕರ ಮೂಲಕ ಮಕ್ಕಳ ಭವಿಷ್ಯವನ್ನು ಉಜ್ವಲಗೊಳಿಸುತ್ತಿದ್ದೇವೆ" ಎಂದರು.

ಕಾರ್ಯಕ್ರಮದಲ್ಲಿ 3ನೇ ಮತ್ತು 4ನೇ ತರಗತಿ ವಿದ್ಯಾರ್ಥಿಗಳು "ಕೆಂಪುಕೋಟೆ ದಿಲ್ಲಿಯಲ್ಲಿ ಕ, ಖ, ಗ, ಘ, ಜ" ಹಾಡು ಹಾಡಿ ನೆರೆದವರ ಮನರಂಜಿಸಿದರು. ಇದೇ ವೇಳೆ 2025–26ನೇ ಸಾಲಿನ ಖಖಐಅ ವಾರ್ಷಿಕ ಪರೀಕ್ಷೆಯಲ್ಲಿ 95 ಶೇಕಡಕ್ಕಿಂತ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳನ್ನು ಸನ್ಮಾನಿಸಲಾಯಿತು. ವಿವಿಧ ಶೈಕ್ಷಣಿಕ ಸ್ಪರ್ಧೆಗಳಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಿ ಪ್ರೋತ್ಸಾಹಿಸಲಾಯಿತು.

ಕಾರ್ಯಕ್ರಮದಲ್ಲಿ ಮಧುಸೂಧನ್, ಆದಿರಾಜ್ ಆದೋನಿ, ವೆಂಕಟೇಶ್ ಉಪ್ಪಾರ್, ಮನುಶ್ರೀ ಮುಷ್ಟೂರು ಸೇರಿದಂತೆ ಹಲವರು ಭಾಗವಹಿಸಿದ್ದರು.

ವಿದ್ಯಾರ್ಥಿನಿಯರು ಸುಮಧುರ ಪ್ರಾರ್ಥನೆ ನೆರವೇರಿಸಿದರು. ಕುಮಾರಿ ನವ್ಯ ಹಾಗೂ ಉಮಾದೇವಿ ಕಾರ್ಯಕ್ರಮವನ್ನು ಆಕರ್ಷಕವಾಗಿ ನಿರೂಪಿಸಿದರು. ಕೊನೆಯಲ್ಲಿ ಸಂಸ್ಥೆಯ ನಿರ್ದೇಶಕಿ ಮನುಶ್ರೀ ಮುಷ್ಟೂರು ವಂದಿಸಿದರು. ನಂತರ ಎಲ್ಲರಿಗೂ ಉಪಹಾರ ವ್ಯವಸ್ಥೆ ಮಾಡಲಾಗಿತ್ತು. ಸಿಹಿ ನೆನಪುಗಳೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು.

## ನಗರಸಭೆ ಭ್ರಷ್ಟಾಚಾರ ಸೇರಿ 19 ಬೇಡಿಕೆಗಳಿಗೆ ಆಗ್ರಹ"ಇನ್ನು ಸುಮ್ಮನಿರುವುದಿಲ್ಲ" : ಮಹೇಶರೆಡ್ಡಿ ಮುದ್ನಾಳ್ ಎಚ್ಚರಿಕೆ



**ಯಾದಗಿರಿ:ಮೇ.27:** ನಗರಸಭೆಯಲ್ಲಿ ನಡೆಯುತ್ತಿದೆ ಎನ್ನಲಾದ ಭ್ರಷ್ಟಾಚಾರ, ಕುಡಿಯುವ ನೀರಿನ ಸಮಸ್ಯೆ, ವಿದ್ಯುತ್ ವ್ಯತ್ಯಯ, ರೈತರ ಸಂಕಷ್ಟ ಸೇರಿದಂತೆ ವಿವಿಧ ಜನಪರ ಸಮಸ್ಯೆಗಳ ವಿರುದ್ಧ ಭಾರತೀಯ ಜನತಾ ಪಕ್ಷ ಬುಧವಾರ ನಗರದಲ್ಲಿ ಬೃಹತ್ ಪ್ರತಿಭಟನೆ ನಡೆಸಿತು. ಸುಡುವ ಬಿಸಿಲನ್ನೂ ಲೆಕ್ಕಿಸದೆ ಸಾವಿರಾರು ಬಿಜೆಪಿ ಕಾರ್ಯಕರ್ತರು ಹಾಗೂ ಮುಖಂಡರು ಬೀದಿಗಿಳಿದು ಸ್ಥಳೀಯ ಶಾಸಕರು ಮತ್ತು ಆಡಳಿತ ವ್ಯವಸ್ಥೆಯ ವಿರುದ್ಧ ಘೋಷಣೆಗಳನ್ನು ಕೂಗಿ ಆಕ್ರೋಶ ವ್ಯಕ್ತಪಡಿಸಿದರು.

ನಗರದ ಮೈಲಾಪುರ ಅಗಸಿಯಿಂದ ಆರಂಭವಾದ ಪ್ರತಿಭಟನಾ ಮೆರವಣಿಗೆ ನಗರಸಭೆ ಕಚೇರಿವರೆಗೆ ಸಾಗಿತು. ಬಿಜೆಪಿ ರಾಜ್ಯ ಕಾರ್ಯಕಾರಿ ಮಂಡಳಿ ಸದಸ್ಯ ಮಹೇಶ ರೆಡ್ಡಿ ವೆಂಕಟ ರೆಡ್ಡಿ ಮುದ್ನಾಳ, ಜಿಲ್ಲಾಧ್ಯಕ್ಷ ಬಸವರಾಜಪ್ಪ ವಿಭೂತಿಹಳ್ಳಿ, ಹಿರಿಯ ಮುಖಂಡ ರಾಚಣ್ಣಗೌಡ ಮುದ್ನಾಳ್, ನಗರ ಮಂಡಲ ಅಧ್ಯಕ್ಷ ಲಿಂಗಪ್ಪ ಹತ್ತಿಮನಿ ಹಾಗೂ ತಾಲೂಕು ಮಂಡಲ ಅಧ್ಯಕ್ಷ ರಾಜಶೇಖರ ಕಾಡಂನೋರ ನೇತೃತ್ವದಲ್ಲಿ ನಡೆದ ಮೆರವಣಿಗೆಯಲ್ಲಿ ಯಾದಗಿರಿ ಕ್ಷೇತ್ರದ ವಿವಿಧ ಗ್ರಾಮಗಳಿಂದ ಸಾವಿರಾರು ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಪಾಲ್ಗೊಂಡಿದ್ದರು. ದಾರಿಯುದ್ದಕ್ಕೂ ಘೋಷಣೆಗಳನ್ನು ಕೂಗುತ್ತಾ ಸಾಗಿದ ಕಾರ್ಯಕರ್ತರು ನಗರಸಭೆ ಮುಂಭಾಗದಲ್ಲಿ ಜಮಾಯಿಸಿದರು. ಈ ವೇಳೆ ಮಾಜಿ ಸಂಸದರಾದ ಡಾ.ಉಮೇಶ ಜಾಧವ ಮತ್ತು ರಾಜಾ ಅಮೇಶ ನಾಯಕ, ಪಕ್ಷದ ಜಿಲ್ಲಾ ಉಸ್ತುವಾರಿ ಶರಣಪ್ಪ ತಳವಾರ ಸೇರಿದಂತೆ ಹಲವು ನಾಯಕರು ಪ್ರತಿಭಟನೆಗೆ ಸಾಥ್ ನೀಡಿದರು. ಬಿಸಿಲಿನ ತಾಪ ಹೆಚ್ಚಾಗಿದ್ದರೂ ಕಾರ್ಯಕರ್ತರ ಉತ್ಸಾಹ ಮಾತ್ರ ಕಡಿಮೆಯಾಗಲಿಲ್ಲ.

ಸಭೆಯನ್ನುದ್ದೇಶಿಸಿ ಮಾತನಾಡಿದ ಮಾಜಿ ಸಂಸದ ಡಾ.ಉಮೇಶ ಜಾಧವ, "ಹಿಂದುಳಿದ ಜಿಲ್ಲೆಯೆಂಬ ಹಣೆಪಟ್ಟಿ ಹೊಂದಿರುವ ಯಾದಗಿರಿಯಲ್ಲಿ ಕಾಂಗ್ರೆಸ್ ಸರ್ಕಾರದ ಅವಧಿಯಲ್ಲಿ ಹೇಳಿಕೊಳ್ಳುವಂತಹ ಅಭಿವೃದ್ಧಿ ಕಾರ್ಯಗಳು ನಡೆದಿಲ್ಲ. ಹಿಂದಿನ ಬಿಜೆಪಿ ಸರ್ಕಾರ ಆರಂಭಿಸಿದ ಕಾಮಗಾರಿಗಳನ್ನೇ ಈಗ ಉದ್ಘಾಟಿಸಲಾಗುತ್ತಿದೆ" ಎಂದು ಆರೋಪಿಸಿದರು.

"ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ರಾಜಕೀಯವಾಗಿ ಬೆಳೆದ ಜಿಲ್ಲೆಯೇ ಯಾದಗಿರಿ. ಆದರೂ ಅಭಿವೃದ್ಧಿಯ ಕೊರತೆ ಸ್ಪಷ್ಟವಾಗಿ ಕಾಣುತ್ತಿದೆ. ರಾಜ್ಯದಲ್ಲಿಯೇ ಅತಿ ಹೆಚ್ಚು ಗುಳೆ ಹೋಗುವವರ ಸಂಖ್ಯೆ ಇದೇ ಜಿಲ್ಲೆಯಲ್ಲಿ ಇರುವುದೇ ಅಭಿವೃದ್ಧಿಯ ನೈಜ ಸ್ಥಿತಿಯನ್ನು ತೋರಿಸುತ್ತದೆ" ಎಂದು ಟೀಕಿಸಿದರು.

ಮಾಜಿ ಸಂಸದ ರಾಜಾ ಅಮರೇಶ ನಾಯಕ ಮಾತನಾಡಿ, "ಯಾದಗಿರಿ ಜಿಲ್ಲೆಗೆ ಹಿಂದಿನ ಬಿಜೆಪಿ ಸರ್ಕಾರ ಹಾಗೂ ದಿವಂಗತ ಶಾಸಕ ವೆಂಕಟರೆಡ್ಡಿ ಮುದ್ನಾಳ್ ಅವರ ಕೊಡುಗೆ ಅಪಾರವಾಗಿದೆ. ಮೆಡಿಕಲ್ ಕಾಲೇಜು ಸೇರಿದಂತೆ ಹಲವು ಅಭಿವೃದ್ಧಿ ಯೋಜನೆಗಳು ಬಿಜೆಪಿ ಸರ್ಕಾರದ ಅವಧಿಯಲ್ಲೇ ಜಾರಿಯಾಗಿವೆ" ಎಂದರು.

## ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರ ಸಭೆ ನಗರದ ಸಮಗ್ರ ಅಭಿವೃದ್ಧಿಗೆ ವೇಗ ನೀಡಲು ಶಾಸಕ ಭರತ್ ರೆಡ್ಡಿ ಸೂಚನೆ



**ಬಳ್ಳಾರಿ, ಮೇ 27:** ನಗರದ ಮೂಲಸೌಕರ್ಯ ಅಭಿವೃದ್ಧಿ ಕಾಮಗಾರಿಗಳಿಗೆ ಇನ್ನಷ್ಟು ವೇಗ ನೀಡಬೇಕು ಹಾಗೂ ಸಾರ್ವಜನಿಕರಿಗೆ ಅನುಕೂಲವಾಗುವ ರೀತಿಯಲ್ಲಿ ಯೋಜನೆಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರಬೇಕು ಎಂದು ಬಳ್ಳಾರಿ ನಗರ ಶಾಸಕ ಭರತ್ ರೆಡ್ಡಿ ಅಧಿಕಾರಿಗಳಿಗೆ ಸೂಚಿಸಿದರು.

ನಗರಾಭಿವೃದ್ಧಿ ಪ್ರಾಧಿಕಾರದ ಕಚೇರಿಯಲ್ಲಿ ಮಂಗಳವಾರ ನಡೆದ ಪ್ರಗತಿ ಪರಿಶೀಲನಾ ಸಭೆಯಲ್ಲಿ ಭಾಗವಹಿಸಿ ಮಾತನಾಡಿದ ಅವರು, ನಗರದಲ್ಲಿ ನಡೆಯುತ್ತಿರುವ ವಿವಿಧ ಅಭಿವೃದ್ಧಿ ಕಾಮಗಾರಿಗಳ ಪ್ರಗತಿ ಕುರಿತು ಮಾಹಿತಿ ಪಡೆದು ಅಧಿಕಾರಿಗಳೊಂದಿಗೆ ಚರ್ಚಿಸಿದರು. ರಸ್ತೆ ಅಭಿವೃದ್ಧಿ, ಒಳಚರಂಡಿ ವ್ಯವಸ್ಥೆ, ಕುಡಿಯುವ ನೀರಿನ ಸೌಲಭ್ಯ, ಸಾರ್ವಜನಿಕ ಉದ್ಯಾನಗಳು ಹಾಗೂ ನಾಗರಿಕರಿಗೆ ಅಗತ್ಯ ಮೂಲಭೂತ ಸೌಕರ್ಯಗಳ ಕುರಿತು ವಿಶೇಷವಾಗಿ ಪರಿಶೀಲನೆ ನಡೆಸಿದರು.

ನಗರದ ವೇಗವಾಗಿ ವಿಸ್ತರಿಸುತ್ತಿರುವ ಪ್ರದೇಶಗಳಿಗೆ ಅನುಗುಣವಾಗಿ ಯೋಜನೆಗಳನ್ನು ರೂಪಿಸಿ, ಜನರಿಗೆ ಯಾವುದೇ ತೊಂದರೆ ಆಗದಂತೆ ಕಾಮಗಾರಿಗಳನ್ನು ಸಮಯಕ್ಕೆ ಪೂರ್ಣಗೊಳಿಸಬೇಕು ಎಂದು ಸೂಚಿಸಿದರು. ಸಾರ್ವಜನಿಕರಿಂದ ಬರುತ್ತಿರುವ ದೂರುಗಳು ಹಾಗೂ ಸಮಸ್ಯೆಗಳಿಗೆ ತ್ವರಿತ ಸ್ಪಂದನೆ ನೀಡುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಿದರು.

ನಗರದ ಸೌಂದರ್ಯೀಕರಣ ಹಾಗೂ ಸುಸಜ್ಜಿತ ರಸ್ತೆ ನಿರ್ಮಾಣಕ್ಕೆ ಆದ್ಯತೆ ನೀಡಬೇಕೆಂದು ತಿಳಿಸಿದ ಶಾಸಕ ಭರತ್ ರೆಡ್ಡಿ, ಅಭಿವೃದ್ಧಿ ಕಾಮಗಾರಿಗಳಲ್ಲಿ ಗುಣಮಟ್ಟ ಕಾಪಾಡುವುದು ಅತ್ಯಂತ ಮುಖ್ಯ ಎಂದು ಹೇಳಿದರು. ಸರ್ಕಾರದ ಅನುದಾನವನ್ನು ಸಮರ್ಪಕವಾಗಿ ಬಳಸಿಕೊಂಡು ನಗರವನ್ನು ಮಾದರಿ ನಗರವನ್ನಾಗಿ ರೂಪಿಸುವ ನಿಟ್ಟಿನಲ್ಲಿ ಎಲ್ಲರೂ ಸಮನ್ವಯದಿಂದ ಕಾರ್ಯನಿರ್ವಹಿಸಬೇಕು ಎಂದು ಕರೆ ನೀಡಿದರು.

ಸಭೆಯಲ್ಲಿ ಬಳ್ಳಾರಿ ನಗರಾಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಜೆ.ಎಸ್. ಆಂಜನೇಯಲು, ನಾಮ ನಿರ್ದೇಶಿತ ಸದಸ್ಯರಾದ ಥಿಯೇಟರ್ ಶಿವು, ರಾಕಿ, ಭರತ್, ಆಯುಕ್ತ ಖಲೀಲಸಾಬ ಸೇರಿದಂತೆ ವಿವಿಧ ಇಲಾಖೆಗಳ ಅಧಿಕಾರಿಗಳು ಉಪಸ್ಥಿತರಿದ್ದರು.

## ಸಿಯುಕೆ ಸ್ನಾತಕೋತ್ತರ ಪದವಿ ಪ್ರವೇಶಕ್ಕೆ ಆನ್‌ಲೈನ್ ಅರ್ಜಿ ಆಹ್ವಾನ



**ಕಲಬುರಗಿ,ಮೇ 27:** ಕಡಗಂಚಿಯಲ್ಲಿರುವ ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯವು 2026–27ನೇ ಸಾಲಿನ ಸ್ನಾತಕೋತ್ತರ ಪದವಿಗೆ ಅರ್ಹತಾ ಪರೀಕ್ಷೆ( CUET (PG) ಮೂಲಕ ಪ್ರವೇಶಕ್ಕೆ ಅರ್ಜಿಯನ್ನು ಆನ್‌ಲೈನ್ ಮೂಲಕ ಆಹ್ವಾನಿಸಿದೆ ಎಂದು ಸಿಯುಕೆ ಕುಲಪತಿ ಪ್ರೊ.ಬಟ್ಟು ಸತ್ಯನಾರಾಯಣ ಅವರು ಸುದ್ದಿಗೋಷ್ಠಿಯಲ್ಲಿ ತಿಳಿಸಿದರು

ಎಂ.ಎ ಇಂಗ್ಲೀಷ್,ಎಂ ಎ ಹಿಂದಿ,ಎಂ.ಎ ಕನ್ನಡ,ಎಂಎಭಾಷಾಶಾಸ್ತ್ರ,ಎಂ.ಎಅರ್ಥಶಾಸ್ತ್ರಎಂ.ಎಸ್.ಡಬ್ಲ್ಯೂ,ಎಂ.ಎಸ್ಸಿ ಮನೋವಿಜ್ಞಾನ,ಎಂ.ಎಸ್ಸಿ ಭೂಗೋಳಶಾಸ್ತ್ರ,ಎಂ.ಎಸ್ಸಿ ಭೂವಿಜ್ಞಾನ,ಎಂ.ಕಾಂ,ಎಂ.ಎಸ್ಸಿ ಗಣಿತಶಾಸ್ತ್ರಎಂ.ಎಸ್ಸಿ ಭೌತಶಾಸ್ತ್ರ, ಎಂ.ಎಸ್ಸಿ ರಸಾಯನಶಾಸ್ತ್ರ, ಎಂ.ಬಿ.ಎ,ಎಂ.ಬಿ.ಎ– ಪ್ರವಾಸೋದ್ಯಮ ಮತ್ತು ಪ್ರವಾಸ ನಿರ್ವಹಣೆ,ಎಂ.ಎ ಇತಿಹಾಸ ಮತ್ತು ಪುರಾತತ್ವಶಾಸ್ತ್ರ,ಎಂ.ಪಿ.ಎ ಗಾಯನಶಾಸ್ತ್ರ (ಹಿಂದೂಸ್ತಾನಿ),ಎಂ.ಟೆಕ್. ವಿದ್ಯುತ್ ಮತ್ತು ಇಂಧನ ವ್ಯವಸ್ಥೆ, ಅಗಇಖ (PG) 2026, CCMT –2026 & GATE–2026,ಎಂ.ಟೆ.ಕ್ ಆರ್.ಎಫ್. ಮತ್ತು ಮೈಕ್ರೋವೆವ್ ಇಂಜಿನೀಯರಿಂಗ್ CUET (PG) 2026, CCMT – 2026 & GATE–2026,ಎಂ.ಎ. ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ,ಎಂ.ಎ ಸಾರ್ವಜನಿಕ ಆಡಳಿತ ಮತ್ತು ಆಡಳಿತ ವ್ಯವಸ್ಥೆ,ಎಲ್.ಎಲ್.ಎಂ,ಎಂ.ಸಿ.ಎ,ಎಂ.ಎಸ್ಸಿ ಜೆನೆಟಿಕ್ಸ್ ಮತ್ತು ಜಿನೋಮಿಕ್ಸ್,ಎಂ.ಎಸ್ಸಿ ಪ್ರಾಣಿಶಾಸ್ತ್ರ, ಎಂ.ಎಸ್ಸಿ ಸಸ್ಯಶಾಸ್ತ್ರ, ಬಿ.ಎಡ್,ಎಂ.ಎಡ್, ಎಂ.ಪಿ.ಎ ಇನ್ ವಾದ್ಯ ಸಂಗೀತ (ತಬಲಾ),ಎಂ.ಪಿ.ಎ ಇನ್ ದೃಶ್ಯ ಕಲಾ

(ಪೆಂಟಿಂಗ್) ,ಎಂ.ಕಾಂ (ಬ್ಯಾಂಕಿಂಗ್ ಮತ್ತು ಹಣಕಾಸು ತಂತ್ರಜ್ಞಾನ,ಎಂ.ಎಸ್ಸಿ ಸಂಖ್ಯಾಶಾಸ್ತ್ರ ಮತ್ತು ದತ್ತಾಂಶ ವಿಶ್ಲೇಷಣೆ,ಎಂ.ಟೆಕ್ ಇನ್ ಕೃತಕ ಬುದ್ದಿಮತ್ತೆ ಮತ್ತು ಯಂತ್ರ ಅಧ್ಯಯನ,ಮಾಸ್ಟರ್ ಆಫ್ ಲೈಬ್ರರಿ ಮತ್ತು ಮಾಹಿತಿ ವಿಜ್ಞಾನ, ಒಂದು ವರ್ಷದ ಕಾರ್ಯಕ್ರಮ ಅರ್ಹತಾ ಪರೀಕ್ಷೆಗಳು ಈ ರೀತಿ ಇವೆ 2ನೇಪುಟಕ್ಕೆ

## ಮೊದಲನೇ ಪುಟದಿಂದ

## ಸಿಯುಕೆ ಸ್ನಾತ್ತಕೋತ್ತರ ಪದವಿ ಪ್ರವೇಶಕ್ಕೆ ಆನ್‌ಲೈನ್ ಅರ್ಜಿ ಆಹ್ವಾನ

ಎಂ.ಎಸ್ಸಿ ಗಣಿತಶಾಸ್ತ್ರ ,ಎಂ.ಎಸ್ಸಿ ಭೌತಶಾಸ್ತ್ರ ,ಎಂ.ಎಸ್ಸಿ ರಸಾಯನಶಾಸ್ತ್ರ ,ಎಂ.ಎಸ್ಸಿ ಮನೋವಿಜ್ಞಾನ , ಭೂಗೋಳಶಾಸ್ತ್ರ,ಎಂ.ಎಸ್ಸಿ ಭೂ–ವಿಜ್ಞಾನ ,ಎಂ.ಎ ಇಂಗ್ಲೀಷ್ ,ಎಂ.ಎ ಹಿಂದಿ,.ಎಂ.ಎ ಸಾರ್ವಜನಿಕ ಆಡಳಿತ ಮತ್ತು ಆಡಳಿತ ವ್ಯವಸ್ಥೆ,ಎಂ.ಎ ಭಾಷಾಶಾಸ್ತ್ರ ,ಎಂ.ಕಾಂ,ಎಂ.ಎ ಪತ್ರಿಕೋದ್ಯಮ ಮತ್ತು ಸಮೂಹ ಸಂವಹನ,ಎಂ.ಎ ಇತಿಹಾಸ ಮತ್ತು ಪುರಾತತ್ವಶಾಸ್ತ್ರ,ಎಂ.ಎಸ್.ಡಬ್ಲ್ಯೂ,ಎಂ.ಎ ಅರ್ಥಶಾಸ್ತ್ರ,
(ಈ ಪದವಿ ಕೋರ್ಸ್ ಕಾರ್ಯಕ್ರಮಗಳ ಹೆಚ್ಚಿನ ವಿವರಗಳಿಗಾಗಿ ಸಿಯುಕೆ ವೆಬ್‌ಸೈಟ್‌ನಲ್ಲಿ (Prospectµ) ಪ್ರಕಟಿಸಲಾಗಿದೆ. (www.cuk.ac.in) ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ಸ್ನಾತ್ತಕೋತ್ತರ ಪದವಿ ಕಾರ್ಯಕ್ರಮಗಳಿಗೆ ಪ್ರವೇಶ ಪಡೆಯುವ ಆಸಕ್ತ ಅಭ್ಯರ್ಥಿಗಳು ಕಡ್ಡಾಯವಾಗಿ CUK–SAMARTH ಪೋರ್ಟಲ್ ಮೂಲಕ ನೊಂದಣಿ ಮಾಡಿಕೊಳ್ಳಬೇಕು. (http:// cukcuet.samarth.edu.in/pg/ CUET (PG)–2026 ಗೆ ಅರ್ಜಿ ಸಲ್ಲಿಸಿ, ಸಂಬಂಧಿತ ವಿಷಯಗಳಲ್ಲಿ CUET (PG) –2026 ಅಥವಾ GATE–2026 ನಲ್ಲಿ ಅರ್ಹತೆ ಪಡೆದ ಅಭ್ಯರ್ಥಿಗಳು ಮಾತ್ರ ನೊಂದಣಿಗೆ ಅರ್ಹರಾಗಿರುತ್ತಾರೆ. (ವಿವಿಧ ಪದವಿ ಕಾರ್ಯಕ್ರಮಗಳ ಪ್ರವೇಶ ಅರ್ಹತೆ ಕುರಿತು ಹೆಚ್ಚಿನ ಮಾಹಿತಿಗಾಗಿ ಸಿಯುಕೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಿರುವ ಪ್ರಾಸ್ಪೆನ್ನು ನೋಡಬಹುದಾಗಿದೆ)
ಎಲ್ಲಾ ಅಭ್ಯರ್ಥಿಗಳು ಈ ಕೆಳಕಂಡಂತೆ ಮರುಪಾವತಿಯಾಗದ ನೊಂದಣಿ ಶುಲ್ಕವನ್ನು ಪಾವತಿಸಬೇಕು.
ವರ್ಗ ಮರುಪಾವತಿಯಾಗದ ನೊಂದಣಿ ಶುಲ್ಕ (ರೂ.)ಸಾಮಾನ್ಯ, ಓಬಿಸಿ, (ನಾನ್–ಕ್ರೀಮಿಲೇಯರ್), ಇಡಬ್ಲ್ಯೂಎಸ್. 500/–ಎಸ್.ಸಿ./ಎಸ್.ಟಿ./ಪಿಡಬ್ಲ್ಯೂಡಿ 100/–(ನೊಂದಣಿ ಶುಲ್ಕದಲ್ಲಿ ವ್ಯವಹಾರ ಶುಲ್ಕಗಳು ಒಳಗೊಂಡಿರುವುದಿಲ್ಲ.)
ವಿವಿಧ ಕಾರ್ಯಕ್ರಮಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಪ್ರತ್ಯೇಕ ನೊಂದಣಿ ಶುಲ್ಕವನ್ನು ಪಾವತಿಸಬೇಕು.
ಕರ್ನಾಟಕ ಕೇಂದ್ರೀಯ ವಿಶ್ವವಿದ್ಯಾಲಯದ ವಿವಿಧ ಸ್ನಾತ್ತಕೋತ್ತರ ಪದವಿ ಕಾರ್ಯಕ್ರಮಗಳಿಗೆ ನೊಂದಣಿಯ ತಾತ್ಕಾಲಿಕ ವೇಳಾಪಟ್ಟಿ ಈ ಕೆಳಗಿನಂತಿದೆ.
ಕ್ರಮ ಸಂ ಸಂಪೂರ್ಣ ವಿವಿರ ದಿನಾಂಕ ಮತ್ತು ಸಮಯ
1.ನೋಂದಣಿ ಪ್ರಾರಂಭ
–ಆನ್‌ಲೈನ್ ನೊಂದಣಿ, ಶುಲ್ಕ ಪಾವತಿ (ನೊಂದಣಿ ಶುಲ್ಕ) , ಕೋರ್ಸಗಳ ಆಯ್ಕೆ ಭರ್ತಿ ಮತ್ತು ದಾಖಲೆಗಳ ಅಪಲೋಡ್ ಮಾಡುವುದು.
–CUET(PG)–2026 ಪರೀಕ್ಷೆಯಲ್ಲಿ ಅಂಕ ಪಡೆದ ಅಭ್ಯರ್ಥಿಗಳು ಮಾತ್ರ ನೊಂದಣಿಗೆ ಅರ್ಹರು.
–GATE–2026 ಪರೀಕ್ಷೆಯಲ್ಲಿ ಅಂಕ ಪಡೆದ ಅಭ್ಯರ್ಥಿಗಳು ಮಾತ್ರ ನೊಂದಣಿಗೆ ಅರ್ಹರು. (ಆಯ್ಕೆ ಮಾಡಿಕೊಂಡ ಕೋರ್ಸಗಳಿಗೆ ಮಾತ್ರ)
• CUK–SAMARTH ಪೋರ್ಟಲ್ (http:// cukcuet.samarth.edu.in/pg/ ನಲ್ಲಿ ನೊಂದಾಯಿಸಿದ ಅಭ್ಯರ್ಥಿಗಳನ್ನು ಮಾತ್ರ ಸಿಯುಕೆ ಪಿಜಿ ಪ್ರವೇಶಕ್ಕೆ ಪರಿಗಣಿಸಲಾಗುವುದು
22.05.2026,
ಸಂಜೆ 4.00ನೊಂದಣಿಗೆ ಕೊನೆಯ ದಿನಾಂಕ
– ನಿಗದಿತ ಅವಧಿ ಮುಗಿದ ನಂತರ ನೊಂದಣಿಯನ್ನು ಸ್ವೀಕರಿಸಲಾಗುವುದಿಲ್ಲ. 10.06.2026,
ಬೆಳಿಗ್ಗೆ 11.00 ಕ್ಕೆ
ನೊಂದಾಯಿತ ಅಭ್ಯರ್ಥಿಗಳ ಪಟ್ಟಿಯನ್ನು ಸಿಯುಕೆ ವೆಬ್‌ಸೈಟ್‌ನಲ್ಲಿ ಪ್ರಕಟಿಸಲಾಗುವುದು. 10.06.2026,
ಬೆಳಿಗ್ಗೆ 11.00 ಕ್ಕೆ
ದೂರು ಸ್ವೀಕಾರ
–ವಿದ್ಯಾರ್ಥಿಗಳ ದೂರು ಸಂಬಂಧಿಸಿದಂತೆ ನಮೂನೆಯು ವಿಶ್ವವಿದ್ಯಾಲಯದ ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. 10.06.2026, ಬೆಳಿಗ್ಗೆ 11.00 ರಿಂದ 11.06.2026 ಬೆಳಿಗ್ಗೆ 11.00 ರ ವರೆಗೆ
– ಸಿಯುಕೆ ಪ್ರವೇಶ ಪ್ರಕ್ರಿಯೆಯು ಸಂಪೂರ್ಣವಾಗಿ CUK–SAMARTH ಪೋರ್ಟಲ್ ಮೂಲಕ (ಆನ್‌ಲೈನ್ ವಿಧಾನದಲ್ಲಿ ಮಾತ್ರ) ನಡೆಯಲಿದೆ.
– ಶುಲ್ಕ ಪಾವತಿಯು ಸಹ CUK–SAMARTH ಪೋರ್ಟಲ್ ಮೂಲಕವೇ (ಆನ್‌ಲೈನ್ ಪಾವತಿ) ಮಾಡಬೇಕು.
– ಅಭ್ಯರ್ಥಿಗಳಿಂದ ಉಂಟಾಗುವ ಯಾವುದೇ ವಿಳಂಬಕ್ಕೆ ವಿಶ್ವವಿದ್ಯಾಲಯವು ಜವಾಬ್ದಾರಿಯಾಗಿರುವುದಿಲ್ಲ.
– ಶುಲ್ಕ ಪಾವತಿಯಲ್ಲಿ ಉಂಟಾಗುವ ತಾಂತ್ರಿಕ ತೊಂದರೆ ಅಥವಾ ವಿಳಂಬಕ್ಕೆ ವಿಶ್ವವಿದ್ಯಾಲಯ ಹೊಣೆಯಾಗುವುದಿಲ್ಲ.
ಎಂ.ಬಿ.ಎ ಪ್ರವೇಶ ಕಾರ್ಯಕ್ರಮಗಳಿಗೆ ಅಭ್ಯರ್ಥಿಗಳ CUET (PG) 2026 ಪರೀಕ್ಷೆಯ ಮೆರಿಟ್ ಆಧಾರದ ಮೇಲೆ ಹಾಗೂ ಗುಂಪು ಸಹ ಚರ್ಚೆ ಹಾಗೂ ವೈಯಕ್ತಿಕ ಸಂದರ್ಶನ ಮೂಲಕ ಆಹ್ವಾನಿಸಲಾಗುವುದು. ಅಂತಿಮ ಅರ್ಹತಾ ಪಟ್ಟಿಯು 50% ಪ್ರವೇಶ ಪರೀಕ್ಷೆ ಹಾಗೂ 50% ಗುಂಪು ಮತ್ತು ವೈಯಕಿಕ್ತ ಸಂದರ್ಶನ ಮೂಲಕ ಆಯ್ಕೆ ಮಾಡಲಾಗುತ್ತದೆ.
6.ಎಂ.ಟೆಕ್ ಕೋರ್ಸಗಳಿಗೆ (ಎಂ.ಟೆಕ್ RF ಮತ್ತು ಮೈಕ್ರೋವೇವ್ ಎಂಜಿನಿಯರಿಂಗ್ ಹಾಗೂ ಎಂ.ಟೆಕ್ ಪವರ್ ಮತ್ತು ಎನರ್ಜಿ ಸಿಸ್ಟಮ್ಸ್) 50% ಸೀಟುಗಳನ್ನು CUET (PG) 2026 ಆಧಾರದ ಮೇಲೆ ಮತ್ತು ಉಳಿದ 50% ಸೀಟುಗಳನ್ನು CCMT 2026 (Centralized Counselling for M.Tech./M.Arch./M.Plan.Admissions) ಮೂಲಕ ಭರ್ತಿ ಮಾಡಲಾಗುತ್ತದೆ. ಆದರೆ CCMT–2026 ಮೂಲಕ ಪ್ರವೇಶ ಪಡೆದ ಅಭ್ಯರ್ಥಿಗಳು ಸಂಬಂಧಿಸಿದ Dean/ HOD ಅವರನ್ನು ಸಂಪರ್ಕಿಸಬೇಕು. CCMT–2026 ವಿದ್ಯಾರ್ಥಿಗಳು ಲಭ್ಯವಿಲ್ಲದಿದ್ದಲ್ಲಿ, ಸೀಟುಗಳನ್ನು CUET–PG 2026 ಅಭ್ಯರ್ಥಿಗಳಿಂದ ಭರ್ತಿ ಮಾಡಲಾಗುತ್ತದೆ.
7.ಮೀಸಲು ವರ್ಗಗಳಿಗೆ ಅರ್ಜಿ ಸಲ್ಲಿಸುವ ಅಭ್ಯರ್ಥಿಗಳು ಮಾನ್ಯವಾದ ಪ್ರಮಾಣ ಪತ್ರಗಳನ್ನು (SC/ST/OBC,Non–CreamyLayer/EWS) ನಿಗದಿತ ನಮೂನೆಯಲ್ಲಿ ಸಂಬಂಧಿತ ಪ್ರಾಧಿಕಾರದಿಂದ ಪಡೆದು ಸಲ್ಲಿಸಬೇಕು. ಮೂಲ ಪ್ರಮಾಣ ಪತ್ರಗಳನ್ನು ಪ್ರವೇಶ ಪರಿಶೀಲನೆ ಸಮಯದಲ್ಲಿ ಹಾಜರುಪಡಿಸಬೇಕು.
8.ಅಭ್ಯರ್ಥಿಗಳು ಈ ಕೆಳಗಿನ ದಾಖಲೆಗಳನ್ನು ಸ್ಕ್ಯಾನ್ ಪ್ರತಿಗಳನ್ನು ಸಿದ್ಧವಾಗಿಡಬೇಕು. (JPG/PDF,ಗರಿಷ್ಠ 500 ಏಃ ಪ್ರತಿಯೊಂದು)
– ಪಾಸ್‌ಪೋರ್ಟ್ ಸೈಜ್ ಡಿಜಿಟಲ್ ಫೋಟೋ.
– ಪ್ರೌಢ ಶಾಲೆ (10ನೇ ತರಗತಿ) ಅಂಕಪಟ್ಟಿ.
– ಪಿಯುಸಿ–II/(12ನೇ ತರಗತಿ) ಅಂಕಪಟ್ಟಿ.
– ಜನ್ಮ ದಿನಾಂಕದ ಮಾನ್ಯ ಪ್ರಮಾಣ ಪತ್ರ.
– ಮೈಗ್ರೇಶನ್ ಪ್ರಮಾಣ ಪತ್ರ.(ಇದ್ದಲ್ಲಿ).
– ಶಾಲೆ ಬಿಟ್ಟ ಪ್ರಮಾಣ ಪತ್ರ / ವರ್ಗಾವಣೆ ಪ್ರಮಾಣ ಪತ್ರ.(ಇದ್ದಲ್ಲಿ).
– ಜಾತಿ ಪ್ರಮಾಣಪತ್ರಗಳು (SC/ST/OBC–NCL/EWS) (ಅನ್ವಯಿಸಿದರೆ)
– ಸ್ವಯಂ ಘೋಷಣಾ ಪತ್ರ OBC–NCL ವರ್ಗಕ್ಕೆ.
– PWD/PH ಪ್ರಮಾಣ ಪತ್ರ. (ಅನ್ವಯಿಸಿದರೆ)
– ಕಾಶ್ಮೀರಿ ವಲಸೆ ಪ್ರಮಾಣ ಪತ್ರ.(ಅನ್ವಯಿಸಿದರೆ)
– ರಕ್ಷಣಾ ಪಡೆ ವಾರ್ಡ್ ಪ್ರಮಾಣ ಪತ್ರ. (ಅನ್ವಯಿಸಿದರೆ)
– ಕ್ರೀಡಾ ಕೋಟಾ ಪ್ರಮಾಣ ಪತ್ರಗಳು. (ಅನ್ವಯಿಸಿದರೆ)
–NCC/NSS ಪ್ರಮಾಣ ಪತ್ರಗಳು, (ಅನ್ವಯಿಸಿದರೆ)
– ಕಲ್ಯಾಣ ಕರ್ನಾಟಕ ಪ್ರದೇಶ (371ಎ) ಪ್ರಮಾಣ ಪತ್ರ, (ಅನ್ವಯಿಸಿದರೆ)
– ಅಗತ್ಯ ಪ್ರಮಾಣಪತ್ರಗಳನ್ನು ಸಲ್ಲಿಸದಿರುವ ಕುರಿತು ಅಂಡರ್ಟೇಕಿಂಗ್ ಫಾರ್ಮ್, (ಅನ್ವಯಿಸಿದರೆ)
– SC/ST ಅಭ್ಯರ್ಥಿಗಳಿಗಾಗಿ ಉಚಿತ ವಿದ್ಯಾರ್ಥಿ ವೇತನ (Free–ship) ಕಾರ್ಡ್, (ಅನ್ವಯಿಸಿದರೆ)
ನಿರ್ದಿಷ್ಟ ಯಾವುದೇ ಸ್ನಾತ್ತಕೋತ್ತರ ಪದವಿ ಪ್ರವೇಶ ಕಾರ್ಯಕ್ರಮಗಳಿಗೆ ಅರ್ಜಿ ಸಲ್ಲಿಸುವ ಮೊದಲು ತಮ್ಮ ಅರ್ಹತೆಯನ್ನು ತಾವು ಖಚಿತಪಡಿಸಿಕೊಳ್ಳುವುದು ಅಭ್ಯರ್ಥಿಯ ಸ್ವಂತ ಜವಾಬ್ದಾರಿಯಾಗಿದೆ. ಪಿಜಿ ಕಾರ್ಯಕ್ರಮಗಳ ಪ್ರವೇಶಕ್ಕಾಗಿ ಕಡ್ಡಾಯವಾಗಿ ಆನ್‌ಲೈನ್ ಮೂಲಕವೇ ನೋಂದಣಿ ಮಾಡಿಕೊಳ್ಳತಕ್ಕದ್ದು.
ಪ್ರವೇಶ ಪ್ರಕ್ರಿಯೆ, ಹೆಚ್ಚಿನ ಮಾಹಿತಿ ಮತ್ತು ನಿರಂತರ ಮಾರ್ಗಸೂಚಿಗಳಿಗಾಗಿ ಅಭ್ಯರ್ಥಿಗಳು ಕಡ್ಡಾಯವಾಗಿ ಅಗಿಏ ವೆಬ್‌ಸೈಟ್ (www.cuk.ac.in) ಭೇಟಿ ನೀಡಬೇಕು ಎಂದು ಅವರು ವಿವರಿಸಿದರು

## ನಗರಸಭೆ ಭ್ರಷ್ಟಾಚಾರ ಸೇರಿ 19 ಬೇಡಿಕೆಗಳಿಗೆ ಆಗ್ರಹ"ಇನ್ನು ಸುಮ್ಮನಿರುವುದಿಲ್ಲ" : ಮಹೇಶರೆಡ್ಡಿ ಮುದ್ನಾಳ್ ಎಚ್ಚರಿಕೆ

"ಇನ್ನು ಮೌನವಾಗಿರುವುದಿಲ್ಲ" : ಮಹೇಶರೆಡ್ಡಿ ಎಚ್ಚರಿಕೆ ಬಿಜೆಪಿ ರಾಜ್ಯ ಕಾರ್ಯಕಾರಿ ಮಂಡಳಿ ಸದಸ್ಯ ಮಹೇಶ ರೆಡ್ಡಿ ವೆಂಕಟ ರೆಡ್ಡಿ ಮುದ್ನಾಳ ಮಾತನಾಡಿ, "ರಾಜ್ಯ ಸರ್ಕಾರಕ್ಕೆ ಮೂರು ವರ್ಷಗಳಾದರೂ ಯಾದಗಿರಿ ಕ್ಷೇತ್ರದಲ್ಲಿ ಹೊಸ ಅಭಿವೃದ್ಧಿ ಕಾಮಗಾರಿಗಳು ಕಾಣುತ್ತಿಲ್ಲ. ಹಿಂದಿನ ಸರ್ಕಾರದ ಯೋಜನೆಗಳಿಗೆ ಅಡಿಗಲ್ಲು ಹಾಕುವುದು ಮತ್ತು ಪೂರ್ಣಗೊಂಡ ಕಾಮಗಾರಿಗಳನ್ನು ಉದ್ಘಾಟಿಸುವುದೇ ಈಗಿನ ಶಾಸಕರ ಸಾಧನೆಯಾಗಿದೆ" ಎಂದು ವ್ಯಂಗ್ಯವಾಡಿದರು.
"2028ರ ಚುನಾವಣೆಯನ್ನು ಗಮನದಲ್ಲಿಟ್ಟುಕೊಂಡು ಬಿಜೆಪಿ ಈಗಿನಿಂದಲೇ ಜನಪರ ಹೋರಾಟ ಆರಂಭಿಸಿದೆ. ನಗರಸಭೆ ಸೇರಿದಂತೆ ಎಲ್ಲೆಡೆ ನಡೆಯುತ್ತಿರುವ ಭ್ರಷ್ಟಾಚಾರಕ್ಕೆ ಕಡಿವಾಣ ಹಾಕದಿದ್ದರೆ ಹೋರಾಟ ಮತ್ತಷ್ಟು ತೀವ್ರಗೊಳ್ಳಲಿದೆ" ಎಂದು ಎಚ್ಚರಿಸಿದರು.

ನಗರದ ಮೈಲಾಪುರ ಬೇಸಿಂದ ಹತ್ತಿಕುಣಿವರೆಗೆ ರಸ್ತೆ ಕಾಮಗಾರಿಗೆ ಟೆಂಡರ್ ಆಗಿ ಎರಡು ವರ್ಷ ಕಳೆದರೂ ಕೆಲಸ ಆರಂಭವಾಗಿಲ್ಲ ಎಂದು ಪ್ರಶ್ನಿಸಿದರು."ನಗರಸಭೆಯಲ್ಲಿ ಎಲ್ಲ ಕೆಲಸಕ್ಕೂ ಲಂಚ ಫಿಕ್ಸ್" : ರಾಚಣ್ಣಗೌಡ ಮುದ್ನಾಳ್ ಆರೋಪ ಹಿರಿಯ ಮುಖಂಡ ರಾಚಣ್ಣಗೌಡ ಮುದ್ನಾಳ್ ಮಾತನಾಡಿ, "ನಗರಸಭೆಯಲ್ಲಿ ಪ್ರತಿಯೊಂದು ಕೆಲಸಕ್ಕೂ ಲಂಚ ನಿಗದಿ ಮಾಡಲಾಗಿದೆ ಎಂಬ ಆರೋಪಗಳು ಕೇಳಿಬರುತ್ತಿವೆ. ಜನರಿಗೆ ಸಮರ್ಪಕ ಕುಡಿಯುವ ನೀರು ಸಿಗುತ್ತಿಲ್ಲ. ಜೆಸ್ಕಾಂ ಅಧಿಕಾರಿಗಳ ವೈಫಲ್ಯದಿಂದ ಗ್ರಾಮೀಣ ಭಾಗದಲ್ಲಿ ವಿದ್ಯುತ್ ಸಮಸ್ಯೆ ಗಂಭೀರವಾಗಿದೆ" ಎಂದು ದೂರಿದರು.
ನಗರದ ಪ್ರಮುಖ ರಸ್ತೆಗಳಲ್ಲಿ ತಡೆಗೋಡೆ ನಿರ್ಮಾಣ ಹಾಗೂ ಬೀದಿ ದೀಪ ಅಳವಡಿಕೆ ಕಾಮಗಾರಿಗಳಲ್ಲಿ ಕಳಪೆ ಗುಣಮಟ್ಟದ ಆರೋಪ ಕೇಳಿಬರುತ್ತಿದ್ದರೂ ಅಧಿಕಾರಿಗಳ ವಿರುದ್ಧ ಕ್ರಮ ಕೈಗೊಳ್ಳಲಾಗಿಲ್ಲ ಎಂದು ಅವರು ಅಸಮಾಧಾನ ವ್ಯಕ್ತಪಡಿಸಿದರು.

ಪ್ರಮುಖ ಬೇಡಿಕೆಗಳು
ಪ್ರತಿಭಟನಾಕಾರರು ಜಿಲ್ಲಾಡಳಿತ ಹಾಗೂ ನಗರಸಭೆಗೆ ಸಲ್ಲಿಸಿದ ಮನವಿಯಲ್ಲಿ ಕೆಳಕಂಡ ಬೇಡಿಕೆಗಳನ್ನು ಮುಂದಿಟ್ಟರು:
ರೈತರಿಗೆ ನಿರಂತರ ವಿದ್ಯುತ್ ಪೂರೈಕೆ
ರೈತರ ಆತ್ಮಹತ್ಯೆ ತಡೆಗೆ ಕ್ರಮ
ವಿದ್ಯುತ್ ಸಮಸ್ಯೆ ನಿವಾರಣೆ ಹಾಗೂ ಟಿಸಿಗಳ ಅಳವಡಿಕೆ
ಶುದ್ಧ ಕುಡಿಯುವ ನೀರಿನ ವ್ಯವಸ್ಥೆ
ವಾರ್ಡಗಳಲ್ಲಿ ಕಸ ವಿಲೇವಾರಿ ಮತ್ತು ಒಳಚರಂಡಿ ಸ್ವಚ್ಛತೆ
ಶಾಸ್ತ್ರಿ ವೃತ್ತದಿಂದ ರೈಲ್ವೆ ನಿಲ್ದಾಣದವರೆಗೆ ಸುಗಮ ಸಂಚಾರ ವ್ಯವಸ್ಥೆ
ಮರಳು ಮಾಫಿಯಾ ನಿಯಂತ್ರಣ
ರಾಷ್ಟ್ರೀಯ ಹೆದ್ದಾರಿ–150 ಬೈಪಾಸ್ ಸರ್ವೆಯ ತಾಂತ್ರಿಕ ದೋಷ ಸರಿಪಡಿಕೆ
ಕಾನೂನು ಸುವ್ಯವಸ್ಥೆ ಸುಧಾರಣೆ
ರಾಜ ಕಾಲುವೆ ನಿರ್ಮಾಣದ ಮೂಲಕ ಮಳೆ ನೀರು ಸರಾಗ ಹರಿಯುವ ವ್ಯವಸ್ಥೆ
ಯಾದಗಿರಿ–ಶಹಾಪುರ ಮಾರ್ಗದ ಎಲ್ಲ ಗ್ರಾಮಗಳಲ್ಲಿ ಬಸ್ ನಿಲುಗಡೆ ವ್ಯವಸ್ಥೆ ಮಾಡಬೇಕು ಇನ್ನು
ಪ್ರತಿಭಟನೆಯ ಬಳಿಕ ಜಿಲ್ಲಾಧಿಕಾರಿ ಹಾಗೂ ನಗರಸಭೆ ಪೌರಾಯುಕ್ತರಿಗೆ ಮನವಿ ಸಲ್ಲಿಸಲಾಯಿತು.

ಪ್ರತಿಭಟನೆಯಲ್ಲಿ ಜಿಲ್ಲಾಧ್ಯಕ್ಷ ಬಸವರಾಜಪ್ಪ ವಿಭೂತಿಹಳ್ಳಿ, ಬಿಜೆಪಿ ವಿಭಾಗ ಸಹ ಪ್ರಭಾರಿ ಶರಣಪ್ಪ ತಳವಾರ,ಡಾ.ಶರಣಭೂಪಾಲ ರೆಡ್ಡಿ ನಾಯ್ಕಲ್, ಜಿಲ್ಲಾ ಪ್ರಧಾನ ಕಾರ್ಯದರ್ಶಿ ಪರಶುರಾಂ ಕುರಕುಂದಾ, ನಾಗರತ್ನ ಕುಪ್ಪಿ, ದೇವೇಂದ್ರನಾಥ ನಾದ್, ಜಿಲ್ಲಾ ವಕ್ತಾರ ಹಣಮಂತ ಇಟಗಿ, ಸಿದ್ದಣ್ಣಗೌಡ ಕಾಡಂನೋರ, ಸಿದ್ದಪ್ಪ ಹೊಟ್ಟಿ, ಖಂಡಪ್ಪ ದಾಸನ್, ಮಲ್ಲಣ್ಣಗೌಡ ಹತ್ತಿಕುಣಿ, ವೆಂಕಟರಡ್ಡಿ ಅಬ್ಬೆತುಮಕೂರು, ಸದಾಶಿವಪ್ಪಗೌಡ ರೋಟ್ಟಡಗಿ, ಸುನೀತಾ ಚವ್ಹಾಣ, ಬಸವರಾಜ ಸೊನ್ನದ, ವೀಣಾ ಮೋದಿ, ರುದ್ರುಗೌಡ ಪಾಟೀಲ್, ಸ್ವಾಮಿದೇವ ದಾಸನಕೇರಿ, ದೊಡ್ಡಪ್ಪ ದೇಸಾಯಿ, ಶರಣಗೌಡ ತಂಗಡಗಿ, ರಾಜಶೇಖರಯ್ಯ ಸ್ವಾಮಿ ಆಲಂಪಲ್ಲಿ, ಚಂದ್ರಕಾಂತ ಮಡ್ಡಿ, ರಮೇಶ್ ದೊಡ್ಡಮನಿ, ಮಲ್ಲಿಕಾರ್ಜುನ ಕಟ್ಟಿಮನಿ, ರವಿ ಬಾಪುರೆ, ನಾಗರಡ್ಡಿ ಇಬ್ರಾಹಿಂಪುರ, ಚನ್ನವೀರಯ್ಯ ಸ್ವಾಮಿ, ಶಾಂತಗೌಡ ಪಗಲಾಪುರ, ಗೋಪಾಲ ದಾಸನಕೇರಿ, ನಾಗರಾಜ ಬಿರನೂರ, ಮಹಾದೇವಪ್ಪ ಗಣಪುರ, ಚನ್ನಬಸವರೆಡ್ಡಿ ಠಾಣಾಗುಂದಿ, ಮಲ್ಲಿಕಾರ್ಜುನ ಕುರಕುಂಬಳಿ, ಸುರೇಶ ರಾಠೋಡ್, ಪರ್ವತರೆಡ್ಡಿ ಬೆಂಡಬೆಂಬಳಿ, ಶರಣಗೌಡ ಅಲ್ಲಿಪುರ, ಕರೆಮ್ಮ ವರ್ಕನಳ್ಳಿ, ಮಾರಪ್ಪ ವರ್ಕನಳ್ಳಿ, ಆನಂದ ಚವ್ಹಾಣ, ವಿನೋದ ರಾಠೋಡ್, ನಾನು ರಾಠೋಡ, ಎಂ.ಡಿ. ಗೌಸ್, ಅಕ್ತರ್ ಸೇಠ್, ಬಸವರಾಜ ಹೆಡಗಿಮದ್ರಾ, ಶಿವಕುಮಾರ ಅರುಣಿ, ಲಕ್ಷ್ಮಣ ಚವ್ಹಾಣ, ಜಿಲ್ಲಾ ಮಾಧ್ಯಮ ಸಂಚಾಲಕ ವಿರುಪಾಕ್ಷಯ್ಯ ಸ್ವಾಮಿ ಹೆಡಗಿಮದ್ರಾ ಸೇರಿದಂತೆ ಅನೇಕ ಬಿಜೆಪಿ ಮುಖಂಡರು ಹಾಗೂ ಕಾರ್ಯಕರ್ತರು ಭಾಗವಹಿಸಿದ್ದರು.

# ಬೆಂಗಳೂರಿನಲ್ಲಿ ಹೋಂಸ್ಟೇಗಳಿಗೆ ನೋಂದಣಿ ಕಡ್ಡಾಯ

**ಬೆಂಗಳೂರು. ಮೇ–27–**ಬೆಂಗಳೂರು ನಗರ ಜಿಲ್ಲೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ಹೋಂಸ್ಟೇಗಳು ಕಡ್ಡಾಯವಾಗಿ ಪ್ರವಾಸೋದ್ಯಮ ಇಲಾಖೆಯ ಅಡಿಯಲ್ಲಿ ನೋಂದಣಿ ಮಾಡಿಸಿಕೊಳ್ಳಬೇಕು ಎಂದು ಜಿಲ್ಲಾ ಪ್ರವಾಸೋದ್ಯಮ ಅಭಿವೃದ್ಧಿ ಸಮಿತಿ ಸೂಚನೆ ನೀಡಿದೆ. ಪ್ರವಾಸೋದ್ಯಮ ಚಟುವಟಿಕೆಗಳು ಹೆಚ್ಚುತ್ತಿರುವ ಹಿನ್ನೆಲೆ, ಪ್ರವಾಸಿಗರ ಸುರಕ್ಷತೆ, ಗುಣಮಟ್ಟದ ಸೇವೆ ಹಾಗೂ ಕಾನೂನುಬದ್ಧ ನಿರ್ವಹಣೆಗೆ ಈ ಕ್ರಮ ಕೈಗೊಳ್ಳಲಾಗಿದೆ.

ಕರ್ನಾಟಕ ಪ್ರವಾಸೋದ್ಯಮ ವ್ಯಾಪಾರ (ಸೌಲಭ್ಯ ಮತ್ತು ನಿಯಂತ್ರಣ) ಅಧಿನಿಯಮ–2015ರ ಅನ್ವಯ, ಅಧಿಕೃತ ನೋಂದಣಿ ಪತ್ರ ಪಡೆಯದೇ ಹೋಂಸ್ಟೇ ನಡೆಸುವುದು ಕಾನೂನುಬಾಹಿರವಾಗಿದ್ದು, ಈಗಾಗಲೇ ಅನಧಿಕೃತವಾಗಿ ಕಾರ್ಯನಿರ್ವಹಿಸುತ್ತಿರುವ ಹೋಂಸ್ಟೇ ಮಾಲೀಕರು ತಕ್ಷಣವೇ ನೋಂದಣಿ ಪ್ರಕ್ರಿಯೆ ಪೂರ್ಣಗೊಳಿಸುವಂತೆ ಸೂಚಿಸಲಾಗಿದೆ.

ನೋಂದಣಿಗೆ ಅಗತ್ಯ ದಾಖಲೆಗಳು: ಹೋಂಸ್ಟೇ ಮಾಲೀಕರು ಉಪ ನಿರ್ದೇಶಕರು, ಪ್ರವಾಸೋದ್ಯಮ ಇಲಾಖೆ, ಬೆಂಗಳೂರು ನಗರ ಜಿಲ್ಲೆ ಕಚೇರಿಗೆ ಬೇಟಿ ನೀಡಿ ದಾಖಲೆಗಳನ್ನು ಸಲ್ಲಿಸಿ ಲೈಸೆನ್ಸ್ ಪಡೆಯಬೇಕು ಎಂದು ಅದೇಶ ನೀಡಿದರೆ.

ಹೋಂ ಸ್ಟೇ ಲೈಸೆನ್ಸ್ ಪಡೆಯಲು ಏನು ಮಾಡಬೇಕು?

ಗ್ರಾಮ ಪಂಚಾಯಿತಿ ನಿರಾಕ್ಷೇಪಣಾ ಪತ್ರ

ಇ–ಖಾತಾ / ಪಹಣಿ

ಪೊಲೀಸ್ ನಿರಾಕ್ಷೇಪಣಾ ಪತ್ರ

ತಹಶೀಲ್ದಾರರಿಂದ ವಾಸಸ್ಥಳ ದೃಢೀಕರಣ ಪತ್ರ

ಆಧಾರ್ ಕಾರ್ಡ್

ಮಾಲೀಕರ ಭಾವಚಿತ್ರ



ಹೋಂಸ್ಟೇ ಯೋಜನೆಯ ಛಾಯಾಚಿತ್ರಗಳನ್ನು ಸಲ್ಲಿಸಬೇಕು.

ನಂತರ ದಾಖಲೆಗಳ ಪರಿಶೀಲನೆಯ ನಂತರ ಮಾತ್ರ ಅಧಿಕೃತ ನೋಂದಣಿ ಪತ್ರ ನೀಡಲಾಗುತ್ತದೆ.

ಕಾನೂನು ಕ್ರಮದ ಎಚ್ಚರಿಕೆ: ಅಧಿಕೃತ ಪರವಾನಗಿ ಇಲ್ಲದೆ ಕಾರ್ಯನಿರ್ವಹಿಸುವ ಹೋಂಸ್ಟೇಗಳ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಇಲಾಖೆ ಎಚ್ಚರಿಸಿದೆ. ಅಧಿನಿಯಮ ಉಲ್ಲಂಘನೆ ಕಂಡುಬಂದರೆ:

10,000ರವರೆಗೆ ದಂಡ ಎರಡು ತಿಂಗಳವರೆಗೆ ಸರಳ ಜೈಲು ಶಿಕ್ಷೆ

ಅಥವಾ ಎರಡೂ ಶಿಕ್ಷೆಗಳು ವಿಧಿಸುವ ಅವಕಾಶ ಇದೆ.

ಇದೇ ವೇಳೆ, ರೆಸಾರ್ಟ್‌ಗಳಲ್ಲಿ ಯಾವುದೇ ಕಾನೂನುಬಾಹಿರ ಚಟುವಟಿಕೆಗಳು ನಡೆಯುತ್ತಿರುವುದು ಪತ್ತೆಯಾದರೆ ಕಠಿಣ ಕ್ರಮ ಜರುಗಿಸಲಾಗುವುದು ಎಂದು ಪ್ರಕಟಣೆಯಲ್ಲಿ ತಿಳಿಸಲಾಗಿದೆ.

ಹೆಚ್ಚಿನ ಮಾಹಿತಿಗಾಗಿ ಉಪ ನಿರ್ದೇಶಕರ ಕಚೇರಿ, ಪ್ರವಾಸೋದ್ಯಮ ಇಲಾಖೆ ಇಲ್ಲಿಗೆ ಬೇಟಿ ನೀಡಿ ಹೆಚ್ಚಿನ ಮಾಹಿತಿ ಪಡೆಯಬಹುದು ಎಂದು ಪ್ರವಾಸೋದ್ಯಮ ಇಲಾಖೆ ನಿರ್ದೇಶಕರು ತಿಳಿಸಿದರು..

# ಗೇಣಿದಾರರ ಸಮಸ್ಯೆ ಅಧ್ಯಯನಕ್ಕೆ ಸಮಿತಿ ರಚನೆ




**ಶಿವಮೊಗ್ಗ:ಮೇ.27–**ಶಾಲಾ ಜಮೀನುಗಳ ಗೇಣಿದಾರರ ಸಮಸ್ಯೆಗಳನ್ನು ಅಧ್ಯಯನ ಮಾಡಲು ಸರ್ಕಾರ ಸಮಿತಿ ರಚನೆ ಮಾಡಬೇಕು. ಶಿವಮೊಗ್ಗಕ್ಕೆ ಬರಲಿರುವ ಸಿಎಂಗೆ ಈ ಬಗ್ಗೆ ಮನವಿ ಸಲ್ಲಿಸಲಾಗುವುದು ಎಂದು ರಾಜ್ಯ ಭೂವಿದ್ಯಾದಾನ ಶಾಲಾ (ಜಮೀನು ಗೇಣಿ ಹೋರಾಟ ಸಮಿತಿಯ ಜಿಲ್ಲಾಧ್ಯಕ್ಷ ಕಲ್ಲೂರು ಮೇಘರಾಜ್ ಹೇಳಿದರು.

ಪ್ರೆಸ್ ಟ್ರಸ್ಟ್‌ನಲ್ಲಿ ಮಂಗಳವಾರ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಈ ಗೇಣಿ ಸಾಗುವಳಿದಾರರ ಸಮಸ್ಯೆ ಹಾಗೆಯೇ ಉಳಿದಿದೆ. ನಮ್ಮ ಹೋರಾಟ ಸಮಿತಿ 30 ವರ್ಷಗಳಿಂದ ಗೇಣಿ ರೈತರ ಪರವಾಗಿ ಹೋರಾಟ ಮಾಡುತ್ತಲೇ ಬ0ದಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ನಮ್ಮ ಹೋರಾಟ ಸಮಿತಿಯ ಜೊತೆ ಚರ್ಚಿಸಲು ಇಲ್ಲಿಯವರೆಗೆ ಸಿದ್ಧರಾಗಿಲ್ಲ. ಉಸ್ತುವಾರಿ ಸಚಿವ ಮಧು ಬಂಗಾರಪ್ಪನವರ ಮಾತು ಕೇಳಿಕೊಂಡು ಮುಖ್ಯಮಂತ್ರಿ ಶಾಲಾ ಸ್ವತ್ತು ಸಂರಕ್ಷಣಾ ಕಾಯ್ದೆಯನ್ನು ಜಾರಿಗೆ ತ0ದು ಸಾವಿರಾರು ಶಾಲಾ ಜಮೀನು ಗೇಣಿ ದಾರರ ಕುಟುಂಬವನ್ನು ಒಕ್ಕಲೆಬ್ಬಿಸಿ ಬೀದಿಗೆ ಹಾಕುತ್ತಿದ್ದಾರೆಂದು ಆರೋಪಿಸಿದರು.

ಜುನ್ 1ರಂದು ಶಿವಮೊಗ್ಗಕ್ಕೆ ಮುಖ್ಯಮಂತ್ರಿ ಸಿದ್ದರಾಮಯ್ಯ ಬರಲಿದ್ದು, ಅಂದು ಅವರನ್ನು ಭೇಟಿಯಾಗಿ ತಮ್ಮ ಸಮಿತಿ ಮನವಿ ಸಲ್ಲಿಸಲಿದೆ. 60–60 ವರ್ಷಗಳಿಂದ ಶಾಲಾ ಗೇಣಿ ಜಮೀನು ಸಾಗುವಳಿ ಮಾಡುತ್ತಿರುವ ಗೇಣಿ ಕುಟುಂಬಗಳಿಗೆ ಕಾಂಗ್ರೆಸ್‌ನ 20 ಅಂಶಗಳ ಕಾರ್ಯಕ್ರಮದಂತೆ ಉಳುವವನೆ ಹೊಲದೊಡೆಯ ಎಂಬ ಸಿದ್ಧಾಂತದಂತೆ ಕೂಡಲೇ ಭೂ ಒಡೆತನದ ಹಕ್ಕುಪತ್ರ ನೀಡಲು ಒತ್ತಾಯಿಸಲಾಗುವುದು ಎಂದರು.

ಶಾಲಾ ಜಮೀನು ಗೇಣಿದಾರರ ಸಮಸ್ಯೆಗಳನ್ನು ಅಧ್ಯಯನ ಮಾಡಲು ಅನುಕೂಲವಾಗುವಂತೆ ಹಿರಿಯ ಲೇಖಕರುಗಳಾದ ದೇವನೂರು ಮಹಾದೇವ, ಬರಗೂರು ರಾಮ ಚಂದ್ರಪ್ಪ, ಮಾಜಿ ಶಿಕ್ಷಣ ಸಚಿವ ಕಿಮ್ಮನೆ ರತ್ನಾಕರ್ ಅವರುಗಳನ್ನೊಳ ಗೊಂಡ ಒಂದು ಸಮಿತಿಯನ್ನು ಸರ್ಕಾರ ರಚಿಸಿ, ಆ ವರದಿಯನ್ನು ಪಡೆದು ಮುಂದಿನ ಕ್ರಮ ಕೈಗೊಳ್ಳ ಬೇಕು ಎಂದು ಒತ್ತಾಯಿಸಿದರು.

ಪತ್ರಿಕಾಗೋಷ್ಠಿಯಲ್ಲಿ ಹೋರಾಟ ಸಮಿತಿಯ ಪ್ರಮುಖರಾದ ಪಿ.ಡಿ. ಮಂಜಪ್ಪ, ಹೆಚ್.ಎಂ.ಸಂಗಯ್ಯ, ಲೋಕೇಶ್, ಭೈರಪ್ಪ, ಶಂಕ್ರಾ ನಾಯ್ಕ್, ಮಂಜಪ್ಪ ಮೊದಲಾದವರಿದ್ದರು.

# ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿ, ಸಂಸ್ಥೆಗಳಿಂದ ಅರ್ಜಿ ಆಹ್ವಾನ

**ರಾಯಚೂರು ಮೇ.27:** ಕೇಂದ್ರ ಸರ್ಕಾರದ ಸಾಮಾಜಿಕ ನ್ಯಾಯಾ ಮತ್ತು ವಿಕಲಚೇತನರ ಸಬಲೀಕರಣ ಇಲಾಖೆಯ ವತಿಯಿಂದ 2026-27ನೇ ಸಾಲಿನಲ್ಲಿ ವಿಕಲಚೇತನರಿಗಾಗಿ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿರುವ ವ್ಯಕ್ತಿ ಹಾಗೂ ಸಂಸ್ಥೆಗಳಿಂದ ಅರ್ಜಿ ಆಹ್ವಾನಿಸಲಾಗಿದೆ.

ಆಸಕ್ತರು ಅರ್ಜಿಗಳನ್ನು ದಿನಾಂಕ: 31-07-2026ರೊಳಗಾಗಿ ಆಂಗ್ಲ ಭಾಷೆಯಲ್ಲಿ www.depwd.gov.in and www.awards.gov.in ಆನ್‌ಲೈನ್ ವೆಬ್‌ಸೈಟ್‌ನಲ್ಲಿ ನೇರವಾಗಿ ಅರ್ಜಿಗಳನ್ನು ಸಲ್ಲಿಸಬಹುದಾಗಿದೆ. ಆನ್‌ಲೈನ್‌ನಲ್ಲಿ ಸಲ್ಲಿಸಿದ ಪ್ರಸ್ತಾವನೆಯನ್ನು ಹಾರ್ಡ್ ಪ್ರತಿಯೊಂದಿಗೆ ಪ್ರಸ್ತಾವನೆಯನ್ನು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳ ಕಚೇರಿ, ಜಿಲ್ಲಾ ವಿಕಲಚೇತನರ ಹಾಗೂ ಹಿರಿಯ ನಾಗರೀಕರ ಸಬಲೀಕರಣ ಇಲಾಖೆ, ಕಟ್ಟಡ ಮ.ನಂ:-1-3-1411/4 ಆಶಾಪೂರು ರಸ್ತೆ, ಆಫೀರ್ಸ್ ಕಾಲೋನಿ ಎದುರುಗಡೆ ಶ್ರೀ ರಾಜಾಮಾತಾ ದೇವಸ್ಥಾನ ಹತ್ತಿರ, ರಾಯಚೂರು ಇಲ್ಲಿ ಸಲ್ಲಿಸಬಹುದಾಗಿದೆ.

ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08532-200992ಗೆ ಕಚೇರಿ ಸಮಯದಲ್ಲಿ ಸಂಪರ್ಕ ಮಾಡಬಹುದಾಗಿದೆ. ತಡವಾಗಿ ಬಂದಂತಹ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ ಎಂದು ಜಿಲ್ಲಾ ಅಂಗವಿಕಲರ ಕಲ್ಯಾಣಾಧಿಕಾರಿಗಳು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಲಿಂಗಸುಗೂರ: ಮೀನುಗಾರಿಕೆ ಇಲಾಖೆಯಿಂದ ನೇರ ಗುತ್ತಿಗೆ ಅರ್ಜಿ ಆಹ್ವಾನ

**ರಾಯಚೂರು ಮೇ.27:** ಜಿಲ್ಲೆಯ ಲಿಂಗಸೂಗೂರು ತಾಲ್ಲೂಕಿನ ಕೃಷ್ಣ ನದಿಭಾಗದ ಐದಬಾವಿಯಿಂದ ತಿಂತಣಿ ಬ್ರಿಜ್‌ಯವರೆಗೆ ಮೀನುಪಾಶುವಾರು ಹಕ್ಕನ್ನು 2026-27ನೇ ಮೀನುಗಾರಿಕೆ ಫಸಲಿ ವರ್ಷದಿಂದ 2030-31ನೇ ಮೀನುಗಾರಿಕೆ ಫಸಲಿ ವರ್ಷದವರೆಗೆ ಗರಿಷ್ಠ ಐದು ವರ್ಷಗಳ ಅವಧಿಗೆ ಸರ್ಕಾರದ ನಿಯಮಗಳ ಅರ್ಹ ಮೀನುಗಾರರ ಸಹಕಾರ ಸಂಘ ಮತ್ತು ಮೀನುಗಾರಿಕೆ ಇಲಾಖೆಯಡಿ ನೊಂದಣೆಯಾದ ಅರ್ಹ ಮೀನು ಉತ್ಪಾದಕರ ಸಂಸ್ಥೆಗಳಿಗೆ ನೇರ ಗುತ್ತಿಗೆ ನೀಡಲು ಅರ್ಜಿ ಆಹ್ವಾನಿಸಲಾಗಿದೆ.

ಜಲಸಂಪನ್ಮೂಲಗಳ ಮೀನುಪಾಶುವಾರು ಹಕ್ಕನ್ನು (ಅನುಬಂಧ-10) ಪಡೆಯಲಿಚ್ಛಿಸುವ ಅರ್ಹ ಮೀನುಗಾರರ ಸಹಕಾರ ಸಂಘ ಮಾತ್ರ ನಿಗದಿತ ನಮೂನೆಯಲ್ಲಿ ಅರ್ಜಿಯನ್ನು ದಿನಾಂಕ: 12-06-2026 ರೊಳಗಾಗಿ ಕಚೇರಿ ವೇಳೆಯಲ್ಲಿ ಈ ಕಚೇರಿಗೆ ಸಲ್ಲಿಸತಕ್ಕದ್ದು, ನಿಗದಿತ ಅವಧಿಯ ನಂತರ ಸಲ್ಲಿಸುವ ಅರ್ಜಿಗಳನ್ನು ಪರಿಗಣಿಸಲಾಗುವುದಿಲ್ಲ.

ಗುತ್ತಿಗೆ ಪಡೆಯಲು ಸಲ್ಲಿಸಬೇಕಾದ ಅರ್ಜಿ (ಅನುಬಂಧ-9) ಷರತ್ತು ಮತ್ತು ನಿಬಂಧನೆಗಳು (ಅನುಬಂಧ-11) ಮತ್ತು ಗುತ್ತಿಗೆದಾರರು ಬರೆದುಕೊಡಬೇಕಾದ ಗುತ್ತಿಗೆ ಕರಾರಿನ ಮುಚ್ಚಳಿಕೆ ಪತ್ರದ (ಅನುಬಂಧ-10)ರ ಪತ್ರಗಳನ್ನು ಕಚೇರಿಯ ವೇಳೆಯಲ್ಲಿ ಪಡೆಯಬಹುದು ಎಂದು ಲಿಂಗಸುಗೂರು ಮೀನುಗಾರಿಕೆ ಇಲಾಖೆಯ ಸಹಾಯಕ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

# ಕಲಬುರಗಿ ಕಲಾವಿದರು ಪುಣೆ ಕಲಾಶಿಬಿರ ಮತ್ತು ಪ್ರದರ್ಶನದಲ್ಲಿ ಮಿಂಚು



**ಕಲಬುರಗಿ :ಮೇ.27:**ಜಿಲ್ಲೆಯ ಕಲಾವಿದರು ಮೇ 24 ಮತ್ತು 25ರಂದು ಪ್ರತಿಷ್ಠಿತ ಜಿ.ಎಚ್. ರೈಸೋನಿ ಇಂಟರ್‌ನ್ಯಾಷನಲ್ ಸ್ಕಿಲ್ ಟೆಕ್ ವಿಶ್ವವಿದ್ಯಾಲಯದಲ್ಲಿ ನಡೆದ ಎರಡು ದಿನಗಳ ರಾಷ್ಟ್ರೀಯ ಗ್ರೀಷ್ಮಕಾಲ ಕಲಾ ಪ್ರದರ್ಶನ ಮತ್ತು ಭಾರತೀಯ ಕಲಾ ಶಿಬಿರದಲ್ಲಿ ಭಾಗವಹಿಸಿದರು. ಸಮ್ವೇದ್ ಸ್ಕೂಲ್ ಆಫ್ ಆರ್ಟ್, ಮ್ಯೂಸಿಕ್, ವಿಸ್ಯುಅಲೈಸೇಶನ್, ಎಂಟರ್‌ಟೈನ್‌ಮೆಂಟ್ ಅಂಡ್ ಡಿಸೈನ್ ವತಿಯಿಂದ ಸಮ್ವೇದ್ ಆರ್ಟ್ ಗ್ಯಾಲರಿಯಲ್ಲಿ ಸೊಗಸಾಗಿ ಆಯೋಜಿಸಲಾದ ಈ ಸಾಂಸ್ಕೃತಿಕ ಕಾರ್ಯಕ್ರಮವು ವಿಶ್ವವಿದ್ಯಾಲಯ ಆವರಣವನ್ನು ಸೃಜನಶೀಲತೆ, ಬಣ್ಣಗಳು ಮತ್ತು ಕಲಾತ್ಮಕ ಸಂವಾದಗಳ ಸಂಗಮವನ್ನಾಗಿ ರೂಪಿಸಿತು.

ಈ ಕಾರ್ಯಕ್ರಮವನ್ನು ಜಿ.ಎಚ್. ರೈಸೋನಿ ವಿಶ್ವವಿದ್ಯಾಲಯ, ಪುಣೆಯ ಕುಲಪತಿ ಡಾ. ಆರ್. ಡಿ. ಖರಾಡೇಕರ್, ಪ್ರೊ-ಕುಲಪತಿ ಡಾ. ಹೆಂದ್ರೆ, ಸಂವೇದ್ ಶಾಲೆಯ ಡೀನ್ ಡಾ. ಅವಿನಾಶ್ ಡಿ. ಕಾಟೆ, ಪ್ರವೇಶ ವಿಭಾಗದ ಮುಖ್ಯಸ್ಥರು, ರಿಜಿಸ್ಟ್ರಾರ್ ಡಾ. ಅಮೋಲ್ ಪೊತೆ, ಕರ್ನಲ್ ಅಜಿತ್ ಸಿಂಘ್ವಿ ಹಾಗೂ ಇತರರು ಉದ್ಘಾಟಿಸಿದರು.

ರಾಷ್ಟ್ರೀಯ ಮಟ್ಟದ ಈ ಕಾರ್ಯಕ್ರಮದಲ್ಲಿ ದೇಶದ ವಿವಿಧ ಭಾಗಗಳಿಂದ ಆಗಮಿಸಿದ್ದ ಹದಿನಾರು ಖ್ಯಾತ "ಬ್ರಾವಿಸಿಮೊ" ಕಲಾವಿದರು ಭಾಗವಹಿಸಿ ತಮ್ಮದೇ ಆದ ವಿಶಿಷ್ಟ ಕಲಾ ದೃಷ್ಟಿಕೋನ ಮತ್ತು ಸೃಜನಾತ್ಮಕ ಸಂವೇದನೆಯನ್ನು ಪ್ರದರ್ಶನದಲ್ಲಿ ಅನಾವರಣಗೊಳಿಸಿದರು. ಕಲಬುರಗಿಯಿಂದ ಭಾಗವಹಿಸಿದ ಕಲಾವಿದರಲ್ಲಿ ರಾಜಶೇಖರ ಶಾಮಣ್ಣ, ರೆಹಮಾನ್ ಪಟೇಲ್, ದಾದಾ ಚಿತ್ರದುರ್ಗ, ಮೊಹಮ್ಮದ್ ಅಯಾಜುದ್ದೀನ್ ಪಟೇಲ್, ರಾಜಶೇಖರ ಚಿಂಚೊಳ್ಳಿ, ರೇವಣಸಿದ್ದಪ್ಪ ಹೊಟ್ಟಿ ಮತ್ತು ಸಯ್ಯದ್ ಮುಸ್ತಫಾ ಸೇರಿದ್ದಾರೆ. ಇತರೆ ಪ್ರದೇಶಗಳಿಂದ ಸುರೇಂದ್ರ ಕುಡಪಣೆ ಪಾಟೀಲ್, ಮುಂಜಾ ನರ್ವಾಡೆ, ಪೂರ್ಣಿಮಾ ವಾಲುಂಜ್, ವೈಶಾಲಿ ಸಿತ್ರೆ, ದೇವೇಂದ್ರ ಪೊಟ್ಟುಖೆ, ಮಧುಕರ್ ಚಂದನಶಿವ ಹಾಗೂ ಆರತಿ ನಾಗ್ಲೆ ಭಾಗವಹಿಸಿದ್ದರು.

ಈ ಕಲಾವಿದರ ಕಲಾಕೃತಿಗಳು ಆಧುನಿಕ ಕಲ್ಪನೆ ಮತ್ತು ಭಾರತೀಯ ಸಾಂಪ್ರದಾಯಿಕ ಕಲಾ ಪರಂಪರೆಯ ಸಮನ್ವಯವನ್ನು ಪ್ರತಿಬಿಂಬಿಸಿತು. ಭಾರತೀಯ ಸಂಸ್ಕೃತಿ, ಗ್ರಾಮೀಣ ಜೀವನ, ಆಧ್ಯಾತ್ಮ ಹಾಗೂ ಸಾಮಾಜಿಕ ಜಾಗೃತಿಗೆ ಸಂಬಂಧಿಸಿದ ವಿಷಯಗಳನ್ನು ಕಲಾಕೃತಿಗಳ ಮೂಲಕ ಮನೋಜ್ಞವಾಗಿ ಅಭಿವ್ಯಕ್ತಿಪಡಿಸಲಾಯಿತು.

ಸಂವೇದ್ ಡೀನ್ ಮತ್ತು ಪ್ರಾಧ್ಯಾಪಕ ಡಾ. ಅವಿನಾಶ್ ಡಿ. ಕಟೇ ಈ ಕಾರ್ಯಕ್ರಮದ ನಿರ್ದೇಶಕರಾಗಿದ್ದರು.

# ಶಿವನಗರ ವಾಕಿಂಗ್ ಟ್ರ್ಯಾಕ್ ಕಾಮಗಾರಿ ವಿಳಂಬಜನಸ್ಪಂದನ ಕಾರ್ಯಕ್ರಮದಲ್ಲಿ ಆಯುಕ್ತರಿಗೆ ನಿವಾಸಿಗಳಿಂದ ಮನವಿ

**ಬೀದರ, ಮೇ 27:** ನಗರದ ಶಿವನಗರ ಪ್ರದೇಶದಲ್ಲಿರುವ ಸಾರ್ವಜನಿಕರ ವಾಕಿಂಗ್ ಸ್ಥಳದ ಅಭಿವೃದ್ಧಿ ಕಾಮಗಾರಿ ನಿಧಾನಗತಿಯಲ್ಲಿ ಸಾಗುತ್ತಿರುವ ಹಿನ್ನೆಲೆ, ಕಾಮಗಾರಿಯನ್ನು ತ್ವರಿತವಾಗಿ ಪೂರ್ಣಗೊಳಿಸಬೇಕೆಂದು ಬಡಾವಣೆಯ ನಿವಾಸಿಗಳು ಇಂದು ನಡೆದ ಜನಸ್ಪಂದನ ಕಾರ್ಯಕ್ರಮದಲ್ಲಿ ನಗರ ಪಾಲಿಕೆಯ ಆಯುಕ್ತ ಮುಖಿಲ್ ಜೈನ್ ಅವರಿಗೆ ಮನವಿ ಪತ್ರ ಸಲ್ಲಿಸಿದರು.

ಶಿವನಗರದ ಬಡಾವಣೆ ಜೊತೆಗೆ ಗುರುನಾನಕ ಕಾಲೋನಿ,ಗುರು ನಗರ ಕಾಲೋನಿ,ವೈಷ್ಣವಿ ಕಾಲೋನಿ, ಭವಾನಿ ಕಾಲೋನಿ ಸೇರಿದಂತೆ ಬಡಾವಣೆಯ ಹಲವು ಸಾರ್ವಜನಿಕರ ವಾಕಿಂಗ್ ಮಾಡಲು ಇಲ್ಲಿಯೆ ಬರುತಾರೆ ವಾಕಿಂಗ್ ಟ್ರ್ಯಾಕ್ ಹಾಗೂ ರಸ್ತೆ-ಚರಂಡಿ ಅಭಿವೃದ್ಧಿ ಕಾಮಗಾರಿಯನ್ನು ಕೆಲವು ತಿಂಗಳುಗಳ ಹಿಂದೆ ಆರಂಭಿಸಲಾಗಿತ್ತು. ಆದರೆ ಕಾಮಗಾರಿ ಇನ್ನೂ ಪೂರ್ಣಗೊಳ್ಳದೇ ಇರುವುದರಿಂದ ಸ್ಥಳೀಯ ನಿವಾಸಿಗಳಿಗೆ ಹಾಗು ಹಿರಿಯ ನಾಗರಿಕರಿಕರಿಗೆ ಹಾಗೂ ಮಹಿಳೆಯರು ದಿನನಿತ್ಯ ವಾಕಿಂಗ್ ಮಾಡಲು ತೊಂದರೆ ಉಂಟಾಗುತಿದ್ದೆ.

ಕಾಮಗಾರಿಯ ವಿಳಂಬ ಕುರಿತು ಈಗಾಗಲೇ ಜಿಲ್ಲಾಡಳಿತ ಅಧಿಕಾರಿಗಳಿಗೆ ಮನವಿ ಸಲ್ಲಿಸಲಾಗಿತ್ತು. ಈ ಹಿನ್ನೆಲೆಯಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ರಹಿಂ ಖಾನ್ ಅವರ ವೈಯಕ್ತಿಕ ಸಹಾಯಕರು ಅಶೋಕುಮಾರ ಕರಂಜಿ ಅವರನ್ನು ದೂರವಾಣಿ ಮೂಲಕ ಸಂಪರ್ಕಿಸಿ, ರಸ್ತೆ ತಡೆ ಪ್ರತಿಭಟನೆ ನಡೆಸಬಾರದೆಂದು ಮನವಿ ಮಾಡಿದ್ದಲ್ಲದೆ, ಕಾಮಗಾರಿಯನ್ನು ಶೀಘ್ರ ಪೂರ್ಣಗೊಳಿಸುವ ನಿಟ್ಟಿನಲ್ಲಿ ವೈಯಕ್ತಿಕವಾಗಿ ಗಮನ ಹರಿಸಲಾಗುತ್ತಿದೆ ಎಂದು ಭರವಸೆ ನೀಡಿರುವುದಾಗಿ ತಿಳಿಸಿದರು.

ಗಣೇಶ ಭಾಗ್ಯವಂತಿ ದೇವಸ್ಥಾನದ ಪಕ್ಕದ ರಸ್ತೆ, ಬಸ ನಿಲ್ದಾಣದಿಂದ ಹಣ್ಣು ಮಗು ವೃತ್ತದವರೆಗೆ ರಸ್ತೆ ಹಾಗೂ ಚರಂಡಿ ಕಾಮಗಾರಿಗಳನ್ನು ಉತ್ತಮ ಗುಣಮಟ್ಟದಲ್ಲಿ



ಶೀಘ್ರ ಪೂರ್ಣಗೊಳಿಸಬೇಕು. ಜೊತೆಗೆ ಕಾಮಗಾರಿಯಲ್ಲಿ ನಿರ್ಲಕ್ಷ್ಯ ತೋರಿದ ಗುತ್ತಿಗೆದಾರರ ವಿರುದ್ಧ ಕ್ರಮ ಕೈಗೊಳ್ಳಬೇಕೆಂದು ನಿವಾಸಿಗಳು ಒತ್ತಾಯಿಸಿದ್ದಾರೆ.

ಈ ಸಂಧರ್ಭದಲ್ಲಿ ಚನ್ನಬಸವಂತ ರೆಡ್ಡಿ,ಅಶೋಕ ಕುಮಾರ ಕರಂಜಿ,ಬಂಡೆಪ್ಪಾ ಕೋಟೆ,ಗಣೇಶ ಭೋಸ್ಲೆ,ನೀಲಕಂಠ ಉಳಾಗಡ್ಡಿ ಶ್ರೀಕಾಂತ ಮೋದಿ,ಪ್ರಭುಶೆಟ್ಟಿ ಮುಲ್ಗೆ, ಸಂಜು ಪಾಟೀಲ್,ನಾಗರಾಜ ಕಪೂರ್, ರಮೇಶ ಬೀರಾದರ್,ಶೇಣ್ಮುಖಿ ಬೀರಾದರ್, ವಿಶ್ವನಾಥ, ಅಶೋಕ ರೆಡ್ಡಿ, ಸೇರಿದಂತೆ ಬಡಾವಣೆಯ ನುರಾರು ನಿವಾಸಿಗಳು ಉಪಸ್ಥರಿದ್ದರು.

# ಗುರುನಾನಕ ಆಸ್ಪತ್ರೆಯಲ್ಲಿ ಉಚಿತ ಕಿಡ್ನಿ ಡಯಾಲಿಸಿಸ್ ಕೇಂದ್ರಕ್ಕೆ ಚಾಲನೆ:ಪ್ರತಿ ತಿಂಗಳು 120 ರೋಗಿಗಳಿಗೆ ಡಯಾಲಿಸಿಸ್: ಡಾ. ರೇಷ್ಮಾ ಕೌರ್



**ಬೀದರ:ಮೇ.27:** ಗುರುನಾನಕ ಆಸ್ಪತ್ರೆಯಲ್ಲಿ ಪ್ರತಿ ತಿಂಗಳು ಸುಮಾರು 120 ರೋಗಿಗಳ ಕಿಡ್ನಿ ಡಯಾಲಿಸಿಸ್ ಮಾಡಲಾಗುತ್ತಿದೆ. ನಾಲ್ಕು ಡಯಾಲಿಸಿಸ್ ಯಂತ್ರಗಳನ್ನು ಹೊಂದಿದ್ದು, ನುರಿತ ಮತ್ತು ಅನುಭವಿ ವೈದ್ಯರು ನಮ್ಮಲ್ಲಿದ್ದಾರೆ. ಬೀದರ ಜನತೆಗೆ ಆರೋಗ್ಯ ಸೇವೆ ಒದಗಿಸುವುದೇ ನಮ್ಮ ಮೂಲ ಗುರಿಯಾಗಿದೆ ಎಂದು ಗುರುನಾನಕ ಶಿಕ್ಷಣ ಸಂಸ್ಥೆಯ ಉಪಾಧ್ಯಕ್ಷರಾದ ಶ್ರೀಮತಿ ಡಾ. ರೇಷ್ಮಾ ಕೌರ್ ತಿಳಿಸಿದರು.

ನಗರದ ಗುರುನಾನಕ ಆಸ್ಪತ್ರೆಯಲ್ಲಿ ನೂತನವಾಗಿ ಆರಂಭಿಸಲಾದ ನಾಲ್ಕು ಕಿಡ್ನಿ ಡಯಾಲಿಸಿಸ್ ಯಂತ್ರಗಳನ್ನು ಲೋಕಾರ್ಪಣೆಗೊಳಿಸಿ ಮಾತನಾಡಿದರು. ಇಲ್ಲಿ ಡಯಾಲಿಸಿಸ್ ಕೇಂದ್ರ ಆರಂಭಿಸಲು ಬೆಂಗಳೂರಿನ ಕಿಡ್ನಿ ಫೌಂಡೇಶನ್ ಹಾಗೂ ರೋಟರಿ ಕ್ಲಬ್ ಆಫ್ ಸಿಲ್ವರ್ ಸ್ಟಾರ್ ಪ್ರಮುಖವಾಗಿ ಸಹಕರಿಸಿದೆ. ಈ ಹಿಂದೆ ನಮ್ಮ ತಂದೆ ಕಿಡ್ನಿ ಸಮಸ್ಯೆಯಿಂದ ಬಳಲುತಿದ್ದರು. ಅವರೂ ಕೂಡಾ ಡಯಾಲಿಸಿಸ್ ಮಾಡಿಸಿಕೊಳ್ಳುತ್ತಿದ್ದರು. ಅಂದಿನಿಂದ ಬೀದರನಲ್ಲಿ ಡಯಾಲಿಸಿಸ್ ಕೇಂದ್ರ ಆರಂಭಿಸುವ ಕನಸು ಕಂಡಿದ್ದೆ. ಅದು ಇದೀಗ ಸಾಕಾರಗೊಂಡಿದೆ ಎಂದರು. ಮೊದಲು ಹೈದರಾಬಾದ ಮತ್ತು ಸೋಲಾಪುರ ಕಡೆಗೆ ಹೋಗಿ ರೋಗಿಗಳು ಡಯಾಲಿಸಿಸ್ ಮಾಡಿಸಿಕೊಂಡು ಬರುತ್ತಿದ್ದರು. ಈ ಅನಿವಾರ್ಯತೆಯನ್ನು ಗುರುನಾನಕ ಆಸ್ಪತ್ರೆ ದೂರ ಮಾಡಿದೆ. ನಮ್ಮನ್ನು ನಾವು ಬೆಳೆಯುವುದರ ಜೊತೆಗೆ ಉತ್ತಮ ಸಮಾಜ ನಿರ್ಮಾಣ ಮಾಡುವುದು ನಮ್ಮ ಜವಾಬ್ದಾರಿಯಾಗಿದೆ. ಮುಂದಿನ ದಿನಗಳಲ್ಲಿ ಇನ್ನೂ ಹೆಚ್ಚಿನ ಆಧುನಿಕ ವೈದ್ಯಕೀಯ ಯಂತ್ರೋಪಕರಣಗಳನ್ನು ತಂದು ಈ ಭಾಗದ ರೋಗಿಗಳ ಚಿಕಿತ್ಸೆಯನ್ನು ಮಾಡಲಾಗುವುದು ಎಂದು ಕೌರ್ ಪ್ರತಿಪಾದಿಸಿದರು.

ಬೆಂಗಳೂರಿನ ಕಿಡ್ನಿ ಫೌಂಡೇಶನ್ ಅಧ್ಯಕ್ಷ ಶ್ರೀರಾಮ್ ಮಾತನಾಡಿ ಬೀದರ ಜಿಲ್ಲೆಯೂ ಇಂದು ಎಲ್ಲಾ ರಂಗಗಳಲ್ಲಿ ಮುಂದಡಿ ಇಡುತ್ತಿದೆ. ಆಧುನಿಕ ಯಂತ್ರೋಪಕರಣ ಬಳಸುವ ಮೂಲಕ ರೋಗಿಗಳಿಗೆ ಗುರುನಾನಕ ಆಸ್ಪತ್ರೆ ಉತ್ತಮ ಸೇವೆ ನೀಡುತ್ತಿದೆ. ರೋಗಿಗಳು ಇದರ ಸದುಪಯೋಗ ಪಡೆದುಕೊಳ್ಳಬೇಕೆಂದು ತಿಳಿಸಿದರು.

ಗುರುನಾನಕ ಶಿಕ್ಷಣ ಸಂಸ್ಥೆಗಳ ಅಧ್ಯಕ್ಷ ಸರ್ದಾರ್ ಡಾ. ಬಲಬೀರಸಿಂಗ್, ರೋಟರಿ ಕ್ಲಬ್ ಗ್ರಾಮೀಣ ಯೋಜನೆಗಳ ಬೆಂಗಳೂರಿನ ವಸಂತ ಚಂದ್ರ, ಕಲ್ಯಾಣ ಝೋನ್ ರೋಟರಿ ಕ್ಲಬ್‌ನ ಗವರ್ನರ್ ಹಾವಶೆಟ್ಟಿ ಪಾಟೀಲ, ಸರ್ದಾರ್ ಪುನೀತ್‌ಸಿಂಗ್, ಸರ್ದಾರ ಪವಿನಿತ್‌ಸಿಂಗ್, ರೋಟರಿ ಪಬ್ಲಿಕ್ ಇಮೇಜ್‌ನ ಅಧ್ಯಕ್ಷ ಬಸವರಾಜ ಧನ್ನೂರ, ಪೂಜಾ ಸ್ಯಾಮುಯೆಲ್ ಜಾರ್ಜ್, ಗುರುನಾನಕ ಆಸ್ಪತ್ರೆಯ ಸಿಇಓ ಕಾಮೇಶ್ವರರಾವ ಸೇರಿದಂತೆ ಇನ್ನಿತರರು ಉಪಸ್ಥಿತರಿದ್ದರು.

# ಶಾಲೆ, ಅಂಗನವಾಡಿಗಳಲ್ಲಿನ ಮೂಲಸೌಕರ್ಯ ಪರಿಶೀಲಿಸಿ



**ಬೆಳಗಾವಿ,ಟಇ.27:** ಶಾಲೆ ಹಾಗೂ ಅಂಗನವಾಡಿಗಳು ಮರುಆರಂಭವಾಗುತ್ತಿರು ವುದರಿಂದ ಜಿಲ್ಲೆಯ ಎಲ್ಲ ಶಾಲೆ ಹಾಗೂ ಅಂಗನವಾಡಿಗಳ ಮೂಲಕಸೌಕರ್ಯಗಳನ್ನು ಸಂಬಂಧಪಟ್ಟ ಅಧಿಕಾರಿಗಳು ಪರಿಶೀಲಿಸಿ, ಅಗತ್ಯ ಸೌಕರ್ಯ ಕಲ್ಪಿಸಬೇಕು ಎಂದು ಜಿಲ್ಲಾ ಪಂಚಾಯತ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ ರಾಹುಲ್ ಶಿಂಧೆ ಸೂಚನೆ ನೀಡಿದರು.ಇಲ್ಲಿನ ಜಿಲ್ಲಾ ಪಂಚಾಯತ ಸಭಾಂಗಣದಲ್ಲಿ ಶಾಲೆ ಹಾಗೂ ಅಂಗನವಾಡಿಗಳ ಪ್ರಾರಂಭೋತ್ಸವದ ಕುರಿತು ಹಮ್ಮಿಕೊಂಡಿದ್ದ ವಿವಿಧ ಇಲಾಖೆಯ ಜಿಲ್ಲಾ ಹಾಗೂ ತಾಲೂಕುಮಟ್ಟದ ಅಧಿಕಾರಿಗಳ ವಿಡಿಯೋ ಸಂವಾದ ಸಭೆಯಲ್ಲಿ ಅಧ್ಯಕ್ಷತೆ ವಹಿಸಿ ಅವರು ಮಾತನಾಡಿದರು.ಶಾಲೆ ಹಾಗೂ ಅಂಗನವಾಡಿಗಳ ಒಳ ಹಾಗೂ ಹೊರಭಾಗದಲ್ಲಿ ಸ್ವಚ್ಛತೆ ಕೈಗೊಳ್ಳಲು ಆದ್ಯತೆ ನೀಡಬೇಕು. ಆಹಾರ ಪದಾರ್ಥಗಳ ದಾಸ್ತಾನು ಕೊಠಡಿಯನ್ನು ಶುಚಿಯಾಗಿಟ್ಟುಕೊಳ್ಳಬೇಕು. ಆಹಾರ ಪದಾರ್ಥಗಳ ಗುಣಮಟ್ಟವನ್ನು ಪರಿಶೀಲಿಸಬೇಕು. ಕುಡಿಯುವ ನೀರು, ವಿದ್ಯುತ್ ಸೇರಿ ಇನ್ನಿತರೇ ಮೂಲಸೌಕರ್ಯಗಳನ್ನು ಒದಗಿಸಬೇಕು ಎಂದು ಸೂಚನೆ ನೀಡಿದರು.

ಕಟ್ಟಡಗಳ ಸ್ಥಿತಿಗತಿ ಪರಿಶೀಲಿಸಿ: ಎಲ್ಲ ಗ್ರಾಪಂ, ಸ್ಥಳೀಯ ಸಂಸ್ಥೆಗಳು ಹಾಗೂ ಮಹಾನಗರ ಪಾಲಿಕೆಗಳ ವ್ಯಾಪ್ತಿಯಲ್ಲಿನ ಶಾಲೆ ಹಾಗೂ ಅಂಗನವಾಡಿ ಕಟ್ಟಡಗಳ ಸ್ಥಿತಿಗತಿಯನ್ನು ಸಂಬಂಧಪಟ್ಟ ಇಲಾಖೆಯ ಅಧಿಕಾರಿಗಳು ಮಳೆಗಾಲ ಆರಂಭಕ್ಕೂ ಮೊದಲೇ ಪರಿಶೀಲಿಸಿ ಅಗತ್ಯಬಿದ್ದರೆ ಬೇರೆ ಕಟ್ಟಡಗಳಲ್ಲಿ ಸ್ಥಳಾಂತರಕ್ಕೆ ಕ್ರಮವಹಿಸಬೇಕು. ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಬೇಕು ಎಂದು ನಿರ್ದೇಶನ ನೀಡಿದರು.

ಶಾಲೆ ಹಾಗೂ ಅಂಗನವಾಡಿಗಳಿಗೆ ಪೂರೈಕೆಯಾಗುವ ಕುಡಿಯುವ ನೀರನ್ನು ಎಫ್.ಟಿ.ಕೆ. ಕಿಟ್ ಮೂಲಕ ಪರಿಶೀಲಿಸಿ ನಂತರ ಪೂರೈಕೆ ಮಾಡಬೇಕು. ಶಾಲೆಗಳ ಸುತ್ತಮುತ್ತ ಅಪಾಯಕಾರಿ ವಿದ್ಯುತ್ ತಂತಿ, ವಿದ್ಯುತ್ ದೀಪ ಇತ್ಯಾದಿಗಳನ್ನು ಬೇರೆಡೆ ಸ್ಥಳಾಂತರಿಸುವಂತೆ ತಿಳಿಸಿದರು.

ಮಕ್ಕಳ ಹಾಜರಾತಿಗೆ ಕ್ರಮವಹಿಸಿ: ಜೂನ್-1 ರಂದು ಶಾಲಾ ಪ್ರಾರಂಭೋತ್ಸವ ಕಾರ್ಯಕ್ರಮವನ್ನು ಎಲ್ಲ ಶಾಲೆಗಳಲ್ಲಿ ಸಂಭ್ರಮದಿಂದ ಆಚರಿಸಬೇಕು. ಯಾವ ಮಕ್ಕಳು ಕೂಡ ಶಾಲೆಯಿಂದ ಹೊರಗುಳಿಯದಂತೆ ಕ್ರಮವಹಿಸಬೇಕು. ಶಾಲೆಯಿಂದ ಹೊರಗುಳಿದ ಮಕ್ಕಳ ಮನವೊಲಿಸಿ ಶಾಲೆಗೆ ಕರೆತರುವ ಕಾರ್ಯ ಮಾಡಬೇಕು. ಅಂಗನವಾಡಿಗಳಲ್ಲಿ ತಿಂಗಳ ಮೂರನೇ ಶನಿವಾರ ಹಾಗೂ ಶಾಲೆಗಳಲ್ಲಿ ತಿಂಗಳ 4ನೇ ಶನಿವಾರ ಕಡ್ಡಾಯವಾಗಿ ಪಾಲಕರ ಸಭೆ ಕೈಗೊಳ್ಳಬೇಕು ಎಂದು ಸೂಚನೆ ನೀಡಿದರು.

ವಸತಿ ನಿಲಯಗಳ ಸುರಕ್ಷತೆಗೆ ಆದ್ಯತೆ ನೀಡಿ: ಎಲ್ಲ ವಸತಿ ನಿಲಯಗಳಲ್ಲಿಯೂ ಕೂಡ ಅಗತ್ಯ ಮೂಲಸೌಕರ್ಯ ಕಲ್ಪಿಸಬೇಕು. ಮುಖ್ಯವಾಗಿ ಮಕ್ಕಳ ಸುರಕ್ಷತೆಗೆ ಆದ್ಯತೆ ನೀಡಬೇಕು. ಅಗತ್ಯ ಭದ್ರತಾ ಸಿಬ್ಬಂದಿ ಹಾಗೂ ಸಿಸಿ ಕ್ಯಾಮೆರಾ ಅಳವಡಿಸಬೇಕು. ಈ ಹಿಂದಿನಂತೆ ಈ ವರ್ಷವೂ ಸಂಜೆಯ ವೇಳೆ ಮಕ್ಕಳಿಗೆ ಆನಲೈನ್ ತರಗತಿಗಳನ್ನು ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.ಸಭೆಯಲ್ಲಿ ಜಿಪಂ ಯೋಜನಾ ನಿರ್ದೇಶಕ ರವಿ ಬಂಗಾರೆಪ್ಪನವರ್, ಉಪ ಕಾರ್ಯದರ್ಶಿ (ಅಭಿವೃದ್ಧಿ) ಬಸವರಾಜ ಅಡವಿಮಠ, ನಗರಾಭಿವೃದ್ಧಿ ಕೋಶದ ಯೋಜನಾ ನಿರ್ದೇಶಕ ಮಲ್ಲಿಕಾರ್ಜುನ ಕಲಾದಗಿ ಸೇರಿ ವಿವಿಧ ಇಲಾಖೆಯ ಜಿಲ್ಲಾ ಹಾಗೂ ತಾಲೂಕುಮಟ್ಟದ ಅಧಿಕಾರಿಗಳು, ಸಿಬ್ಬಂದಿ ಹಾಜರಿದ್ದರು.

# 0–5 ವರ್ಷದ ಎಲ್ಲ ಮಕ್ಕಳು ತಪ್ಪದೇ ಲಸಿಕೆ ಹಾಕಿಕೊಳ್ಳಬೇಕು:ಜಿಲ್ಲಾಧಿಕಾರಿ ಮಹ್ಮದ್ ಇಕ್ರಮುಲ್ಲಾ ಶರೀಫ

**ಕಲಬುರಗಿ, ಮೇ.27:** ಜಿಲ್ಲೆಯಾದ್ಯಂತ ಪಲ್ಸ್ ಪೊಲಿಯೋ ಲಸಿಕಾ ಕಾರ್ಯಕ್ರಮ ಜೂ.28ರಂದು ನಡೆಯಲಿದೆ. ಈ ಹಿನ್ನೆಲೆಯಲ್ಲಿ 0 ರಿಂದ 5 ವರ್ಷದೊಳಗಿನ ಎಲ್ಲ ಮಕ್ಕಳು ತಪ್ಪದೇ ಲಸಿಕೆ ಹಾಕಿಕೊಳ್ಳಬೇಕು. 'ಹೈ ರಿಸ್ಕ್' ಪ್ರದೇಶಗಳಾದ ಬಸ್ ನಿಲ್ದಾಣ, ರೈಲ್ವೆ ನಿಲ್ದಾಣ ಹಾಗೂ ಹೆದ್ದಾರಿಗಳ ಚೆಕ್‌ಪೊಸ್ಟ್‌ಗಳ ಮೇಲೆ ತೀವ್ರ ನಿಗಾವಹಿಸಿ ಎಂದು ಜಿಲ್ಲಾಧಿಕಾರಿ ಮಹ್ಮದ್ ಇಕ್ರಮೂಲ್ಲಾ ಶರೀಫ ಸೂಚನೆ ಅಧಿಕಾರಿಗಳಿಗೆ ನೀಡಿದರು.




ಮಂಗಳವಾರ ನಜಿಲ್ಲಾಧಿಕಾರಿ ಕಚೇರಿ ಸಭಾಂಗಣದಲ್ಲಿ ಆಯೋಜಿಸಿದ್ದ ರಾಷ್ಟ್ರೀಯ ಪಲ್ಸ್ ಪೊ?ಲಿಯೋ ಕಾರ್ಯಕ್ರಮದ ಟಾಸ್ಕ್ ಪೊ?ರ್ಸ್ ಸಮಿತಿ ಸಭೆಯ ಅಧ್ಯಕ್ಷತೆ ವಹಿಸಿ ಮಾತನಾಡಿದ ಅವರು, ವಿದ್ಯಾರ್ಥಿಗಳಿಂದ ಜಾಥಾ ಕಾರ್ಯಕ್ರಮ ಆಯೋಜಿಸಬೇಕು. ಎಂದು ಹೇಳಿದರು.

28 ರಂದು ಜಿಲ್ಲಾದ್ಯಂತ ಬೂತ್‌ಗಳಲ್ಲಿ ಲಸಿಕೆ ಹಾಕಲಾಗುವುದು. ಜೂ 29,30, ಜುಲೈ 1 ರವರೆಗೆ ಮೂರು ದಿನಗಳ ಕಾಲ 1,475 ತಂಡಗಳು ಲಸಿಕೆ ಹಾಕದ ಮಕ್ಕಳನ್ನು ಪತ್ತೆ ಮಾಡಲು ಮನೆ ಮನೆಗೆ ಭೇಟಿ ನೀಡಿ 5 ವರ್ಷದೊಳಗಿನ ಎಲ್ಲ ಮಕ್ಕಳಿಗೂ ಲಸಿಕೆ ನೀಡಬೇಕು. ಯಾವುದೇ ಕಾರಣಕ್ಕೂ ಮಗುವೂ ಲಸಿಕೆಯಿಂದ ವಂಚಿತವಾಗಬಾರದು ಎಂದು ಹೇಳಿದರು.

ಪಲ್ಸ್ ಪೊಲಿಯೋ ಲಸಿಕಾ ಕಾರ್ಯಕ್ರಮಕ್ಕೆ ಜಿಲ್ಲೆಯಲ್ಲಿ 5 ವರ್ಷದೊಳಗಿನ ಒಟ್ಟು ಅಂದಾಜು 3,51,716 ಮಕ್ಕಳಿಗೆ ಲಸಿಕೆ ಹಾಕಲು ಗುರಿ ನೀಡಲಾಗಿದೆ. ಮಕ್ಕಳಿಗೆ ಲಸಿಕೆಗಳನ್ನು ನೀಡಲು ಗ್ರಾಮೀಣ ಹಾಗೂ ನಗರ ಪ್ರದೇಶಗಳಲ್ಲಿ 1,519 ಲಸಿಕಾ ಕೇಂದ್ರಗಳಿಂದ (ಬೂತ್‌ಗಳು) ಮಕ್ಕಳಿಗೆ ಲಸಿಕೆ ಹಾಕಲಾಗುವುದು. ಇದಕ್ಕಾಗಿ 3,364 ಲಸಿಕೆ ಹಾಕುವ ಸಿಬ್ಬಂದಿ ಹಾಗೂ 334 ಮೇಲ್ವಿಚಾರಕರನ್ನು ನಿಯೋಜಿಸಲಾಗಿದೆ. 132 ಟ್ರಾನ್ಸಿಟ್ ತಂಡಗಳು ಹಾಗೂ ದೂರದ ಪ್ರದೇಶಗಳಿಗಾಗಿ 31 ಸಂಚಾರಿ ತಂಡಗಳು ಕಾರ್ಯಾಚರಣೆ ನಡೆಸಲಿವೆ. ಅಂಗನವಾಡಿ ಹಾಗೂ ಶಾಲೆಗಳಲ್ಲಿ ಕೇಂದ್ರಗಳನ್ನು ತೆರೆಯಲು ಸಿದ್ಧತೆಮಾಡಿಕೊಳ್ಳಿ ಎಂದು ಸೂಚನೆ ನೀಡಿದರು. ಅಂದು ನಡೆಯುವ ಕಾರ್ಯಕ್ರಮಕ್ಕೆ ನಿರಂತರವಾಗಿ ವಿದ್ಯುತ್ ಸರಬರಾಜು ಮಾಡಬೇಕೆಂದು ಸಂಬಂಧಪಟ್ಟ ಅಧಿಕಾರಿಗಳಿ ತಿಳಿಸಿದರು. ಕಾರ್ಮಿಕ ಇಲಾಖೆಯ ಸಹಯೋಗದೊಂದಿಗೆ ವಲಸೆ ಹಾಗೂ ಕಟ್ಟಡ ಕಾರ್ಮಿಕರ ಮಕ್ಕಳನ್ನು ತಲುಪಲು ವಿಶೇಷ ಮೈಕ್ರೋ ಪ್ಲಾನ್ ಸಿದ್ಧಪಡಿಸಿಕೊಳ್ಳಿ. ಕೊಳಗೇರಿ, ವಲಸೆ ಕಾರ್ಮಿಕರ ಪ್ರದೇಶ ಹಾಗೂ ಇಟ್ಟಿಗೆ ಭಟ್ಟಿಗಳ ಮೇಲೆ ತೀವ್ರ ನಿಗಾ ಇರಿಸಿ, ಉನ್ನತ ಅಧಿಕಾರಿಗಳ ತಂಡವು ಖುದ್ದಾಗಿ ಹೈ ರಿಸ್ಕ್ ಪ್ರದೇಶಗಳಿಗೆ ಭೇಟಿ ನೀಡಿ ವಾಸ್ತವ ಸ್ಥಿತಿಯನ್ನು ಪರಿಶೀಲಿಸಬೇಕು. ಪೊ?ಷಕರು ತಮ್ಮ ಮಕ್ಕಳಿಗೆ ತಪ್ಪದೇ ಪೊಲಿಯೋ ಲಸಿಕೆ ಹಾಕಿಸಿ ರಾಷ್ಟ್ರೀಯ ಅಭಿಯಾನವನ್ನು ಯಶಸ್ವಿಗೊಳಿಸಬೇಕು ಕೋರಿದರು.

ಕರಪತ್ರ ಹಾಗೂ ಸಾಮಾಜಿಕ ಜಾಲತಾಣಗಳ ಮೂಲಕ ಹೆಚ್ಚು ಪ್ರಚಾರ ನೀಡಬೇಕು. ಪಲ್ಸ್ ಪೊಲಿಯೋ ಕಾರ್ಯಕ್ರಮದ ಯಶಸ್ವಿಗೆ ಶಿಕ್ಷಣ ಇಲಾಖೆ, ಸಾರಿಗೆ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ, ಕಟ್ಟಡ ಕಾರ್ಮಿಕ ಇಲಾಖೆ, ಪೊಲೀಸ ಇಲಾಖೆ ಸೇರಿದಂತೆ ಬೇರೆ ಬೇರೆ ಇಲಾಖೆಗಳು ಒಗ್ಗೂಡಿ ಕಾರ್ಯನಿರ್ವಹಿಸಬೇಕೆಂದರು. ಸರ್ವೇಲೈಸ್ ಅಧಿಕಾರಿ ಅನಿಲ ತಾಳಿಕೋಟಿ ಅವರು ಪಿ.ಪಿ.ಟಿ. ಮೂಲಕ ಮಾಹಿತಿಯನ್ನು ನೀಡಿದರು.

ಇದೇ ಸಂದರ್ಭದಲ್ಲಿ ಪಲ್ಸ ಪೋಲಿಯೋ ಪೋಸ್ಟಗಳನ್ನು ಬಿಡುಗಡೆ ಮಾಡಿದರು. ಸಭೆಯಲ್ಲಿ ಜಿಲ್ಲಾ ಪಂಚಾಯತ್ ಮುಖ್ಯಕಾರ್ಯನಿರ್ವಾಹಕ ಅಧಿಕಾರಿ ರಾಹುಲ ಸಂಕನೂರ್, ಮಹಾನಗರ ಪಾಲಿಕೆಯ ಆಯುಕ್ತರಾದ ಅವಿನಾಶ ಶಿಂಧೆ, ಡಿಹೆ???ಓ ಡಾ. ಶರಣಬಸಪ್ಪ ಕ್ಯಾತನಾಳ, ಜಿಲ್ಲಾ ಸರ್ಜನ್ ರೂಕ್ಕಿಯ್ಯ ಅಸನಾ ರಬ್ ಆರ್.ಸಿ.ಹೆಚ್. ಅಧಿಕಾರಿ ಡಾ.ಸಿದ್ದು ಪಾಟೀಲ, ಶಾಲಾ ಶಿಕ್ಷಣ ಇಲಾಖೆಯ ಉಪನಿರ್ದೇಶಕ ಶಂಕ್ರಮ್ಮ ಡವಳಗಿ, ಮಹಿಳಾ ಮತ್ತು ಮಕ್ಕಳ ಉಪನಿರ್ದೇಶಕ ರಾಜಕುಮಾರ್ ರಾಠೋಡ, ತಾಲೂಕಿನ ತಹಶೀಲ್ದಾರು, ವೈದ್ಯಾಧಿಕಾರಿಗಳು, ಅಂಗನವಾಡಿ , ಆಶಾ ಕಾರ್ಯಕರ್ತರು ಉಪಸ್ಥಿತರಿದ್ದರು.

# ಏಷ್ಯಾ ಲ್ಯಾಬೆಕ್ಸ್ ವಸ್ತು ಪ್ರದರ್ಶನ



**ಬೆಂಗಳೂರು, ಮೇ 27:** ಏಷ್ಯಾ ಲ್ಯಾಬೆಕ್ಸ್ ಎಕ್ಸಿಬಿಷನ್ 2026 ಇಂದು ಬೆಂಗಳೂರು ಇಂಟರ್‌ನ್ಯಾಷನಲ್ ಎಕ್ಸಿಬಿಷನ್ ಸೆಂಟರ್ (BIEC), ಬೆಂಗಳೂರಿನಲ್ಲಿ ಭವ್ಯ ಉದ್ಘಾಟನಾ ಸಮಾರಂಭದೊಂದಿಗೆ ಆರಂಭಗೊಂಡಿತು. ಈ ಕಾರ್ಯಕ್ರಮದಲ್ಲಿ ಔಷಧ ಮತ್ತು ಆರೋಗ್ಯ ಕ್ಷೇತ್ರದ ಗಣ್ಯರು ಹಾಗೂ ತಜ್ಞರು ಭಾಗವಹಿಸಿದರು.

ಉದ್ಘಾಟನಾ ಸಮಾರಂಭಕ್ಕೆ ಮೈಕ್ರೋ ಲಾಬ್ಸ್ ಲಿಮಿಟೆಡ್ ಸಂಸ್ಥೆಯ ಸಿಒಒ ರೆಗ್ಯುಲೇಟರಿ ಮಾರ್ಕೆಟ್ಸ್ ರಾಜೇಶ್ ಕ್ಷೀರಸಾಗರ್ ಮುಖ್ಯ ಅತಿಥಿಯಾಗಿ ಆಗಮಿಸಿದ್ದರು. ನಿಯಂತ್ರಣ ವ್ಯವಹಾರಗಳು ಮತ್ತು ಔಷಧ ಕಾರ್ಯಾಚರಣೆಗಳಲ್ಲಿ ಅವರ ವಿಶಾಲ ಅನುಭವವು ಕೈಗಾರಿಕೆಯ ಬೆಳವಣಿಗೆ ಮತ್ತು ಗುಣಮಟ್ಟದ ಅನುಸರಣೆ ಕ್ಷೇತ್ರದಲ್ಲಿ ಮಹತ್ವದ ಪಾತ್ರ ವಹಿಸಿದೆ.

ಏಷ್ಯಾ ಲ್ಯಾಬೆಕ್ಸ್‌ನ ಆಯೋಜಕ ಹಾಗೂ ನಿರ್ದೇಶಕರಾದ ಜಸ್ಪಾಲ್ ಸಿಂಗ್ ಅವರು ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದ ಗಣ್ಯ ಅತಿಥಿಗಳು, ವಕ್ತಾರರು, ಪ್ರದರ್ಶಕರು ಮತ್ತು ಭೇಟಿ ದಾರರಿಗೆ ಕೃತಜ್ಞತೆ ಸಲ್ಲಿಸಿದರು. ಮುಂದಿನ ಎರಡು ದಿನಗಳ ಕಾಲವೂ ಇದೇ ರೀತಿಯ ಉತ್ಸಾಹ ಮತ್ತು ಭಾಗವಹಿಸುವಿಕೆ ಮುಂದುವರಿಯಲಿದೆ ಎಂಬ ವಿಶ್ವಾಸವನ್ನು ಅವರು ವ್ಯಕ್ತಪಡಿಸಿದರು.ಈ ಪ್ರದರ್ಶನದಲ್ಲಿ ಔಷಧ, ಪ್ರಯೋಗಾಲಯ ಮತ್ತು ಆರೋಗ್ಯ ಕ್ಷೇತ್ರದ ಪ್ರಮುಖ ಹಿತಾಸಕ್ತಿದಾರರು, ಕೈಗಾರಿಕಾ ತಜ್ಞರು, ನವೋದ್ಯಮಿಗಳು ಮತ್ತು ಉದ್ಯಮ ನಾಯಕರು ಭಾಗವಹಿಸಿದರು. ಕೈಗಾರಿಕೆಯ ಇತ್ತೀಚಿನ ತಂತ್ರಜ್ಞಾನಗಳು ಮತ್ತು ಆವಿಷ್ಕಾರಗಳನ್ನು ಪ್ರದರ್ಶಿಸಲು ಹಾಗೂ ನೆಟ್‌ವರ್ಕಿಂಗ್ ಮತ್ತು ಸಹಯೋಗಕ್ಕೆ ಈ ಕಾರ್ಯಕ್ರಮ ಪರಿಣಾಮಕಾರಿ ವೇದಿಕೆಯಾಗುತ್ತಿದೆ.

# ಸತೀಶ್‌ಗೆ ಕೆಪಿಸಿಸಿ ಅಧ್ಯಕ್ಷ ಪಟ್ಟ ಸಾಧ್ಯತೆ

**ಬೆಂಗಳೂರು, ಮೇ 27–** ರಾಜ್ಯದಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯನವರನ್ನು ಬದಲಿಸಿ ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ರವರಿಗೆ ಪಟ್ಟ ಕಟ್ಟಲು ನಿರ್ಧರಿಸಿರುವ ಕಾಂಗ್ರೆಸ್ ಹೈಕಮಾಂಡ್ ಕೆಪಿಸಿಸಿಗೂ ಹೊಸ ಸಾರಥಿಯನ್ನು ನೇಮಕ ಮಾಡಲಿದ್ದು, ಸಚಿವ ಸತೀಶ್ ಜಾರಕಿಹೊಳಿಯವರಿಗೆ ಕೆಪಿಸಿಸಿ ಸಾರಥ್ಯ ಒಲಿಯುವ ಸಾಧ್ಯತೆ ಇದೆ.



ಕಳೆದ ವಿಧಾನಸಭಾ ಚುನಾವಣೆಯನ್ನು ಕಾಂಗ್ರೆಸ್ ಪಕ್ಷ ಕೆಪಿಸಿಸಿ ಅಧ್ಯಕ್ಷರಾಗಿದ್ದ ಡಿ.ಕೆ. ಶಿವಕುಮಾರ್ ರವರ ನೇತೃತ್ವದಲ್ಲಿ ಎದುರಿಸಿತ್ತು. ನಂತರ ಕಾಂಗ್ರೆಸ್ ಸರ್ಕಾರ ಅಧಿಕಾರಕ್ಕೆ ಬಂದು ಡಿ.ಕೆ. ಶಿವಕುಮಾರ್ ಉಪಮುಖ್ಯಮಂತ್ರಿಯಾದ ನಂತರವೂ ಲೋಕಸಭಾ ಚುನಾವಣೆಗೂ ಡಿ.ಕೆ. ಶಿವಕುಮಾರ್ ರವರನ್ನು ಅಧ್ಯಕ್ಷರನ್ನಾಗಿ ಮುಂದುವರೆಸಿತ್ತು. ಲೋಕಸಭಾ ಚುನಾವಣೆ ಬಳಿಕ ಕೆಪಿಸಿಸಿ ಅಧ್ಯಕ್ಷರ ಬದಲಾವಣೆ ಚರ್ಚೆಗಳು ಮುನ್ನಲೆಗೆ ಬಂದಿದ್ದವಾದರೂ ಡಿ.ಕೆ. ಶಿವಕುಮಾರ್ ರವರೇ ಉಪಮುಖ್ಯಮಂತ್ರಿ ಹಾಗೂ ಕೆಪಿಸಿಸಿ ಅಧ್ಯಕ್ಷ ಸ್ಥಾನ ಎರಡೂ ಹುದ್ದೆಗಳನ್ನು ನಿಭಾಯಿಸಿದ್ದರು.

ಸತೀಶ್ ಜಾರಕಿಹೊಳಿ ಅವರು ಈ ಹಿಂದೆಯೇ ಸಚಿವ ಸ್ಥಾನ ಪದತ್ಯಾಗ ಮಾಡಿ ಕೆಪಿಸಿಸಿ ಅಧ್ಯಕ್ಷರಾಗಲು ತಾವು ಸಿದ್ದ ಎಂದು ಹೇಳಿದ್ದರಾದರೂ ಹೈಕಮಾಂಡ್ ಕೆಪಿಸಿಸಿ ಅಧ್ಯಕ್ಷರ ಬದಲಾವಣೆಗೆ ಮನಸ್ಸು ಮಾಡಿರಲಿಲ್ಲ. ಈಗ ರಾಜ್ಯಕ್ಕೆ ಮುಖ್ಯಮಂತ್ರಿಯಾಗಿ ಡಿ.ಕೆ. ಶಿವಕುಮಾರ್ ರವರನ್ನು ನೇಮಕ ಮಾಡಲು ಹೈಕಮಾಂಡ್ ನಿರ್ಧರಿಸಿದ್ದು, ಡಿ.ಕೆ. ಶಿವಕುಮಾರ್ ರವರು ಕೆಪಿಸಿಸಿ ಅಧ್ಯಕ್ಷ ಸ್ಥಾನವನ್ನು ಬಿಟ್ಟು ಕೊಡಬೇಕಾಗುತ್ತದೆ. ಹಾಗಾಗಿ ಕೆಪಿಸಿಸಿಗೂ ಹೈಕಮಾಂಡ್ ಹೊಸ ಅಧ್ಯಕ್ಷರನ್ನು ನೇಮಕ ಆಗಲಿದ್ದು, ಮುಖ್ಯಮಂತ್ರಿ ಸಿದ್ದರಾಮಯ್ಯ ಆಪ್ತ ವಲಯದಲ್ಲಿ ಗುರುತಿಸಿಕೊಂಡಿರುವ ಸತೀಶ್ ಜಾರಕಿಹೊಳಿಯವರಿಗೆ ಕೆಪಿಸಿಸಿ ಸಾರಥ್ಯ ಒಲಿಯುವ ಸಾಧ್ಯತೆಗಳು ಹೆಚ್ಚಿವೆ.

ಇಂದು ದೆಹಲಿಯಿಂದ ಬೆಂಗಳೂರಿಗೆ ಆಗಮಿಸಲಿರುವ ಎಐಸಿಸಿ ಪ್ರಧಾನ ಕಾರ್ಯದರ್ಶಿಗಳಾದ ಕೆ.ಸಿ. ವೇಣುಗೋಪಾಲ್ ಮತ್ತು ಸುರ್ಜೇವಾಲ ರವರು ಶಾಸಕಾಂಗ ಪಕ್ಷದ ಸಭೆಯಲ್ಲಿ ಡಿ.ಕೆ. ಶಿವಕುಮಾರ್ ರವರನ್ನು ನಾಯಕನನ್ನಾಗಿ ಆಯ್ಕೆ ಮಾಡಿದ ನಂತರ ಕೆಪಿಸಿಸಿ ಸಾರಥ್ಯ ವಹಿಸಲಿರುವವರ ಹೆಸರನ್ನು ಪ್ರಕಟಿಸುವರು ಎಂದು ಹೇಳಲಾಗಿದೆ.

# ಭಯೋತ್ಪಾದನೆಗೆ ಕುಮ್ಮಕ್ಕು ಪಾಕ್‌ಗೆ ಭಾರತ ತರಾಟೆ

**ವಾಷಿಂಗ್ಟನ್,ಮೇ.27:–** ಗಡಿಯಾಚೆಗಿನ ಭಯೋತ್ಪಾದನೆಗೆ ಕುಮ್ಮಕ್ಕು ನೀಡುತ್ತಿರುವ ಪಾಕಿಸ್ತಾನವನ್ನು ತೀವ್ರವಾಗಿ ತರಾಟೆಗೆ ತೆಗೆದುಕೊಂಡಿರುವ ಭಾರತ, ಪ್ರಾದೇಶಿಕ ಸಮಗ್ರತೆ ಮತ್ತು ಶಾಂತಿ ಸಹಬಾಳ್ವೆಗೆ ಧಕ್ಕೆ ತರುತ್ತಿದೆ ಎಂದು ಆರೋಪಿಸಿದೆ.




ನ್ಯೂಯಾರ್ಕನ ವಿಶ್ವಸಂಸ್ಥೆಯಲ್ಲಿ ವಿಶ್ವಸಂಸ್ಥೆಯ ಭದ್ರತಾ ಮಂಡಳಿಯ ಮುಕ್ತ ಚರ್ಚೆ ನಡೆದಿದೆ. ಭಾರತದ ಖಾಯಂ ಪ್ರತಿನಿಧಿ, ರಾಯಭಾರಿ ಪರ್ವತನೇನಿ ಹರೀಶ್ ಕೂಡ ಉಪಸ್ಥಿತರಿದ್ದರು.

ರಾಯಭಾರಿ ಪರ್ವತನೇನಿ ಹರೀಶ್, "ಇಂದು ಪಾಕಿಸ್ತಾನ ಮಾಡಿದ ಆಧಾರರಹಿತ ಮತ್ತು ಅನಗತ್ಯ ಹೇಳಿಕೆಗಳಿಗೆ ಪ್ರತಿಕ್ರಿಯಿಸುವುದು ನನ್ನ ಕರ್ತವ್ಯ ಎಂದು ನಾನು ಭಾವಿಸುತ್ತೇನೆ. ಭಾರತ ಸತ್ಯಗಳನ್ನು ಸ್ಪಷ್ಟಪಡಿಸಲು ಬಯಸುತ್ತದೆ. ಸಂಪೂರ್ಣ, ಕಾನೂನುಬದ್ಧ ಮತ್ತು ಬದಲಾಯಿಸಲಾಗದ ಪ್ರವೇಶದ ಪರಿಣಾಮವಾಗಿ ಭಾರತದ ಭಾಗವಾಗಿದ್ದ ಭಾರತೀಯ ಪ್ರದೇಶಗಳ ಮೇಲೆ ತನ್ನ ಅಧಿಕಾರವನ್ನು ಪ್ರತಿಪಾದಿಸಲು ಪ್ರಯತ್ನಿಸಿದ ಪಾಕಿಸ್ತಾನದ ಗಡಿಯಾಚೆಗಿನ ಆಕ್ರಮಣವನ್ನು ಎದುರಿಸುತ್ತಾ ಸ್ವತಂತ್ರ ಭಾರತ ತನ್ನ ಜೀವನವನ್ನು ಪ್ರಾರಂಭಿಸಿದೆ" ಎಂದು ಹೇಳಿದ್ದಾರೆ.

ಪಾಕಿಸ್ತಾನವು ಹಲವಾರು ಯುದ್ಧಗಳನ್ನು ನಡೆಸುವ ಮೂಲಕ, ಭಾರತದ ವಿರುದ್ಧ ಅಪ್ರಚೋದಿತ ಆಕ್ರಮಣವನ್ನು ನಡೆಸುವ ಮೂಲಕ ಮತ್ತು ಗಡಿಯಾಚೆಗಿನ ಭಯೋತ್ಪಾದನೆಯನ್ನು ಪ್ರಾಯೋಜಿಸುವುದನ್ನು ಮುಂದುವರೆಸುವ ಮೂಲಕ ಸಾರ್ವಭೌಮತ್ವ, ಪ್ರಾದೇಶಿಕ ಸಮಗ್ರತೆ ಮತ್ತು ಶಾಂತಿಯುತ ಸಹಬಾಳ್ವೆಯ ತತ್ವಗಳನ್ನು ಉಲ್ಲಂಘಿಸಿದೆ ಎಂದು ಹರೀಶ್ ಹೇಳಿದ್ದಾರೆ.

ಪಾಕಿಸ್ತಾನದ ಗಡಿಯಾಚೆಗಿನ ಭಯೋತ್ಪಾದನೆಯ ಬಳಕೆ ಮತ್ತು "ಸಾವಿರ ಗಾಯಗಳಿಂದ ಭಾರತವನ್ನು ರಕ್ತಸ್ರಾವಗೊಳಿಸುವ" ಅದರ ನೀತಿಯು ವಿಶ್ವಸಂಸ್ಥೆಯ ಚಾರ್ಟಗೆ ಅದರ ಪೊಳ್ಳು ಬದ್ಧತೆಯನ್ನು ಬಹಿರಂಗಪಡಿಸುತ್ತದೆ.

ಭಾರತದ ಸಾಮರ್ಥ್ಯಗಳನ್ನು ಎತ್ತಿ ತೋರಿಸುತ್ತಾ, ಭಾರತವು ಇಂತಹ ಗಡಿಯಾಚೆಗಿನ ಭಯೋತ್ಪಾದನೆಯ ವಿರುದ್ಧ ತನ್ನನ್ನು ತಾನು ರಕ್ಷಿಸಿಕೊಳ್ಳುವ ಎಲ್ಲ ಹಕ್ಕನ್ನು ಹೊಂದಿದೆ ಎಂದು ಹರೀಶ್ ಹೇಳಿದರು.

ಗಡಿಯಾಚೆಗಿನ ಭಯೋತ್ಪಾದನೆಯನ್ನು ಪ್ರಾಯೋಜಿಸುವುದರಿಂದ ಪರಿಣಾಮಗಳು ಉಂಟಾಗುತ್ತವೆ ಎಂಬುದನ್ನು ಪಾಕಿಸ್ತಾನ ಗುರುತಿಸಬೇಕು. ಪಾಕಿಸ್ತಾನವು ತನ್ನ ಆರಂಭದಿಂದಲೂ ಭಯೋತ್ಪಾದನೆ, ಧಾರ್ಮಿಕ ಉಗ್ರವಾದ, ಹಿಂಸಾತ್ಮಕ ಉಗ್ರವಾದ ಮತ್ತು ಭಾರತ ವಿರೋಧಿ ವಾಕ್ಚಾತುರ್ಯದಂತಹ ದುರುದ್ದೇಶಪೂರಿತ ಶಕ್ತಿಗಳನ್ನು ನಿರಂತರವಾಗಿ ಬಳಸುತ್ತಿದೆ.

ಈ ನಿಟ್ಟಿನಲ್ಲಿ ಸತ್ಯಗಳು ಸಾರ್ವಜನಿಕ ದಾಖಲೆಯಲ್ಲಿವೆ ಮತ್ತು ಹೆಚ್ಚಿನ ವಿವರಣೆಯ ಅಗತ್ಯವಿಲ್ಲ. ಪಾಕಿಸ್ತಾನವು ಎಲ್ಲಾ ರೀತಿಯ ಭಯೋತ್ಪಾದನೆಗೆ ತನ್ನ ಬೆಂಬಲವನ್ನು ವಿಶ್ವಾಸಾರ್ಹವಾಗಿ ಮತ್ತು ಬದಲಾಯಿಸಲಾಗದಂತೆ ಕೊನೆಗೊಳಿಸಬೇಕು ಎಂದು ಸ್ಪಷ್ಟಪಡಿಸಿದ್ದಾರೆ.

# ಲೆಬನಾನ್ ಮೇಲೆ ಇಸ್ರೇಲ್ ದಾಳಿ: 31 ಮಂದಿ ಸಾವು

**ಟೆಲ್ ಅವೀವಾ,ಮೇ.27–** ಇಸ್ರೇಲ್ ಪ್ರಧಾನಿ ಬೆಂಜಮಿನ್ ನೆತನ್ಯಾಹು ಅವರು ಹಿಜ್ಬೊಲ್ಲಾ ವಿರುದ್ಧ ಮಿಲಿಟರಿ ಕ್ರಮ ಕೈಗೊಳ್ಳುವುದಾಗಿ ಪ್ರತಿಜ್ಞೆ ಮಾಡಿದ ನಂತರ, ದಕ್ಷಿಣ ಮತ್ತು ಪೂರ್ವ ಲೆಬನಾನ್‌ನಾದ್ಯಂತ ಇಸ್ರೇಲ್ ಸೇನೆ ನಡೆಸಿದ ತೀವ್ರ ದಾಳಿಯಲ್ಲಿ ಕನಿಷ್ಠ 31 ಮಂದಿ ಸಾವನ್ನಪ್ಪಿರುವ ಘಟನೆ ನಡೆದಿದೆ.ಮಕ್ಕಳು ಸೇರಿದಂತೆ ಕನಿಷ್ಠ 31 ಜನರು ಸಾವನ್ನಪ್ಪಿದ್ದು ನೂರಾರರು ಮಂದಿ ಗಾಯಗೊಂಡಿದ್ದಾರೆ ಎಂದು ಲೆಬನಾನ್‌ನ ಆರೋಗ್ಯ ಸಚಿವಾಲಯ ತಿಳಿಸಿದೆ.



ಏಪ್ರಿಲ್ ಮಧ್ಯದಲ್ಲಿ ಅಮೆರಿಕ ಮಧ್ಯಸ್ಥಿಕೆಯಲ್ಲಿ ಕದನ ವಿರಾಮ ಪ್ರಾರಂಭವಾದ ನಂತರದ ಅತ್ಯಂತ ಭೀಕರ ಬಾಂಬ್ ದಾಳಿಗಳಲ್ಲಿ ಒಂದಾಗಿದೆ ಈ ದಾಳಿಯಲ್ಲಿ 100 ಕ್ಕೂ ಹೆಚ್ಚು ಹೆಜ್ಬೊಲ್ಲಾ ಮೂಲಸೌಕರ್ಯ ತಾಣಗಳು ಮತ್ತು ಹೋರಾಟಗಾರರ ಮೇಲೆ ದಾಳಿ ನಡೆಸಲಾಗಿದೆ ಎಂದು ಇಸ್ರೇಲ್ ಸೇನೆ ತಿಳಿಸಿದೆ.ಹೆಜ್ಬೊಲ್ಲಾವನ್ನು ಗುರಿಯಾಗಿಸಿ ನಡೆಸುವಂತೆ ಇಸ್ರೇಲ್ ಸೇನೆಗೆ ಪ್ರಧಾನಿ ಬೆಂಜಮಿನ್ ನೇತನ್ಯಾಹು ಸೂಚನೆ ನೀಡಿದ ಬಳಿಕ ಈ ದಾಳಿ ನಡೆದಿದೆ.ಭದ್ರತಾ ಸಂಪುಟ ಸಭೆಯಲ್ಲಿ ಮಾತನಾಡಿದ ಪ್ರದಾನಿ, ಇಸ್ರೇಲ್ "ಲೆಬನಾನ್‌ನಲ್ಲಿ ನಮ್ಮ ಕಾರ್ಯಾಚರಣೆಯನ್ನು ಇನ್ನಷ್ಟು ಹೆಚ್ಚಿಸುತ್ತಿದೆ" ಎಂದು ಗುಡುಗಿದ್ದರು.ಇಸ್ರೇಲ್ ರಕ್ಷಣಾ ಪಡೆಗಳು ನೆಲದ ಮೇಲೆ ದೊಡ್ಡ ಪಡೆಗಳೊಂದಿಗೆ ಕಾರ್ಯನಿರ್ವಹಿಸುತ್ತಿವೆ ಮತ್ತು ಪ್ರಬಲ ಭೂಪ್ರದೇಶವನ್ನು ವಶಪಡಿಸಿಕೊಳ್ಳುತ್ತಿವೆ" ಉತ್ತರ ಇಸ್ರೇಲ್‌ನಲ್ಲಿರುವ ಸಮುದಾಯಗಳನ್ನು ಹೆಜ್ಬೊಲ್ಲಾ ದಾಳಿಯಿಂದ ರಕ್ಷಿಸಲು "ಭದ್ರತಾ ವಲಯವನ್ನು ಬಲಪಡಿಸುತ್ತಿದ್ದಾರೆ" ಎಂದು ಹೇಳಿದ್ದಾರೆ.ಅಮೆರಿಕ, ಇಸ್ರೇಲ್ ಮತ್ತು ಇರಾನ್ ನಡುವಿನ ಯುದ್ಧವನ್ನು ಕೊನೆಗೊಳಿಸಲು ನಡೆಯುತ್ತಿರುವ ಸಂಕೀರ್ಣ ಮಾತುಕತೆಗಳನ್ನು ಹಳಿತಪ್ಪಿಸುವ ಬೆದರಿಕೆಯನ್ನು ಎರಡೂ ಕಡೆಯವರು ಪದೇ ಪದೇ ಉಲ್ಲಂಘಿಸುತ್ತಿದ್ದಾರೆ ಎಂದು ಆರೋಪಿಸಲಾಗಿದೆ

ಇಸ್ರೇಲ್ ವಾಯು ಮತ್ತು ಫಿರಂಗಿ ದಾಳಿಗಳು ಪ್ರತಿದಿನವೂ ಮುಂದುವರೆದಿವೆ, ವಿಶೇಷವಾಗಿ ಲೆಬನಾನ್‌ನ ದಕ್ಷಿಣದಲ್ಲಿ, ಹೆಜ್ಬೊಲ್ಲಾ ಉತ್ತರ ಇಸ್ರೇಲ್‌ನ ಸಮುದಾಯಗಳ ಮೇಲೆ ಮತ್ತು ದಕ್ಷಿಣ ಲೆಬನಾನ್‌ನ ಕೆಲವು ಭಾಗಗಳನ್ನು ಆಕ್ರಮಿಸಿಕೊಂಡಿರುವ ಇಸ್ರೇಲಿ ಪಡೆಗಳ ಮೇಲೆ ರಾಕೆಟ್‌ಗಳು ಮತ್ತು ಡ್ರೋನ್ ದಾಳಿ ನಡೆಸಲಾಗುತ್ತಿದೆ ಎಂದು ದೂರಿದ್ದಾರೆ.ವೈಮಾನಿಕ ದಾಳಿಗಳು ದಕ್ಷಿಣ ಲೆಬನಾನ್‌ನ ಬೆಕಾ ವ್ಯಾಲಿ ಗ್ರಾಮವಾದ ಮಶ್ಘರಾ ಮತ್ತು ಬುರ್ಜ್ ಅಲ್–ಶಮಾಲಿಯನ್ನು ಗುರಿಯಾಗಿಸಿಕೊಂಡಿವೆ ಎಂದು ಸ್ಥಳೀಯ ಮಾಧ್ಯಮಗಳು ತಿಳಿಸಿವೆ.ಬ್ಯೂಫೋರ್ಟ್ ಕ್ಯಾಸಲ್ ಬಳಿ ಕೆಲವು ದಾಳಿಗಳು ಸಂಭವಿಸಿವೆ ಎಂದು ರಾಜ್ಯ ಮಾಧ್ಯಮ ವರದಿ ಮಾಡಿದೆ, ಸುಮಾರು 900 ವರ್ಷಗಳಷ್ಟು ಹಳೆಯದಾದ ಕೋಟೆಯಾಗಿದ್ದು, ಈ ಪ್ರದೇಶವನ್ನು "ಮಧ್ಯಕಾಲೀನ ಕೋಟೆಗಳ ಅತ್ಯುತ್ತಮ ಸಂರಕ್ಷಿತ ಉದಾಹರಣೆಗಳಲ್ಲಿ ಒಂದಾಗಿದೆ" ಎಂದು ವಿಶ್ವಸಂಸ್ಥೆಯ ಪರಂಪರೆಯ ಸಂಸ್ಥೆ ಯುನೆಸ್ಕೋ ಗುರುತಿಸಿದೆ.ವೀಡಿಯೊ ಹೇಳಿಕೆಯಲ್ಲಿ, ಇರಾನ್ ಬೆಂಬಲಿತ ಶಿಯಾ ಮುಸ್ಲಿಂ ಗುಂಪಿನ ದಾಳಿಗಳಿಗೆ ಪ್ರತಿಕ್ರಿಯೆಯಾಗಿ ಇಸ್ರೇಲ್ ಹೆಜ್ಬೊಲ್ಲಾವನ್ನು ಗುರಿಯಾಗಿಸಿಕೊಂಡು ತನ್ನ ದಾಳಿಗಳ ಸಂಖ್ಯೆ ಮತ್ತು ತೀವ್ರತೆಯನ್ನು ಹೆಚ್ಚಿಸಲಿದೆ ಇದರಲ್ಲಿ ಇಸ್ರೇಲಿ ರಕ್ಷಣೆಯನ್ನು ತಪ್ಪಿಸುವ ಫೈಬರ್–ಆಪ್ಟಿಕ್ ಡ್ರೋನ್‌ಗಳನ್ನು ಒಳಗೊಂಡ ದಾಳಿಗಳು ಸೇರಿವೆ ಎಂದು ಬೆಂಜಮಿನ್ ನೆತನ್ಯಾಹು ಹೇಳಿದ್ದಾರೆ

ಈ ಘೋಷಣೆ ಹಿಜ್ಬೊಲ್ಲಾ ಭದ್ರಕೋಟೆಯಾದ ಬೈರುತ ದಕ್ಷಿಣ ಉಪನಗರಗಳಲ್ಲಿ ಭೀತಿಯ ದೃಶ್ಯಗಳನ್ನು ಸೃಷ್ಟಿಸಿದೆ. ನಿವಾಸಿಗಳು ಈ ಹೇಳಿಕೆಗಳನ್ನು ಅನುಸರಿಸಿ ಪ್ರದೇಶದಿಂದ ಪಲಾಯನ ಮಾಡುತ್ತಿರುವುದು ಕಂಡುಬಂದಿತು. ಸುರಕ್ಷತೆಗಾಗಿ ತಪ್ಪಿಸಿಕೊಳ್ಳಲು ಪ್ರಯತ್ನಿಸುತ್ತಿರುವ ಕುಟುಂಬಗಳೊಂದಿಗೆ ಸಾವಿರಾರು ಕಾರುಗಳು ಬೀದಿಗಳಲ್ಲಿ ಸಾಲುಗಟ್ಟಿ ನಿಂತಿವೆ ಎಂದು ಹೇಳಲಾಗಿದೆ.

Owned, and published by SYED AHAMAD HUSSAINI MATWALE from Ward No,21 S S Matwale Hussaini Saheb Dargha, Jummal Doddi, Po-Manvi,Raichur, Karnataka -584123.
Printed at Hulkoti, New Court, Opposite Plot No, 28, RS No 312/3B, Garag Complex, Gadag, Karnataka-582101 Editor: SYED AHAMAD HUSSAINI MATWALE